ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 12 ಮಾರ್ಚ್ 18, 1984 ಬೆಲೆ 60 ಪೈಸೆ

ನವದೆಹಲಿ ಶಾಂತಿ ಸಮಾವೇಶ

ಸಾಮ್ರಾಜ್ಯಶಾಹಿಗಳ ಯುದ್ಧಕೋರ ನೀತಿ ಸೋಲಿಸಲು ಕರೆ

1984 ಮಾರ್ಚ್ 8 ಮತ್ತು 9 ರಂದು ನವದೆಹಲಿಯಲ್ಲಿ ಅಣು ಯುದ್ಧ ವಿರೋಧಿ ಮತ್ತು ನಮ್ಮ ರಾಷ್ಟ್ರದ ಭದ್ರತೆಗೆ ಬಂದಿರುವ ಅಪಾಯದ ಕುರಿತು ರಾಷ್ಟ್ರೀಯ ಸಮಾವೇಶ ನಡೆಯಿತು. ಸಾಮ್ರಾಜ್ಯಶಾಹಿ ಶಕ್ತಿ ಪ್ರಪಂಚದಲ್ಲಿ ಇಂದು ಹರಿಯಬಿಟ್ಟಿರುವ ಯುದ್ಧದ ಅಪಾಯ, ಇಡೀ ಜಗತ್ತೇ ನಾಶದ ಅಂಚಿಗೆ ತಳ್ಳಲ್ಪಟ್ಟಿರುವ ಪರಿಸ್ಥಿತಿ, ಭಾರತದ ರಾಷ್ಟ್ರೀಯ ಭದ್ರತೆಗೆ ಸಾಮ್ರಾಜ್ಯಶಾಹಿಗಳು ಒಡ್ಡಿರುವ ಸವಾಲು– ಈ ಹಿನ್ನಲೆಯಲ್ಲಿ ರಾಷ್ಟ್ರದಾದ್ಯಂತ ಪ್ರಗತಿಪರ, ಪ್ರಜಾಪ್ರಭುತ್ವವಾದಿ ಶಕ್ತಿಗಳು ಜನರನ್ನು ಐಕ್ಯಹೋರಾಟಕ್ಕೆ ಇಳಿಸಬೇಕಾಗಿರುವ ತುರ್ತು ಅಗತ್ಯವನ್ನು ಸಮಾವೇಶದಲ್ಲಿ ಮನಗಂಡಿತು.

ದೇಶದಲ್ಲೇ ಈ ಮಾದರಿಯ ರಾಷ್ಟ್ರ ಮಟ್ಟದ ಸಮಾವೇಶ ನಡೆಯುತ್ತಿರುವುದು ಇದೇ ಪ್ರಥಮ. ಎಡ ಮತ್ತು ಪ್ರಜಾಪ್ರಭುತ್ವವಾದಿ ವಿರೋಧ ಪಕ್ಷಗಳು [ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಭಾರತ ಕಮ್ಯೂನಿಸ್ಟ್ ಪಕ್ಷ, ಆರ್. ಎಸ್. ಪಿ, ಕಾಂಗ್ರೆಸ್ (ಎಸ್), ಜನವಾದಿ ಪಕ್ಷ, ಕಾಂಗ್ರೆಸ್(ಜೆ), ಫಾರ್ವರ್ಡ್ ಬ್ಲಾಕ್ ಡಿ.ಎಸ್.ಪಿ.] ಸಮಾವೇಶವನ್ನು ಸಂಘಟಿಸಿದ್ದವು. ರಾಷ್ಟ್ರದ ಎಲ್ಲಾ ರಾಜ್ಯಗಳಿಂದ ಸುಮಾರು 3000 ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

ಶಾಂತಿಯ ಸಂಕೇತವಾಗಿ ಪಾರಿವಾಳಗಳನ್ನು ಹಾರಿಬಿಡುವುದರೊಂದಿಗೆ ಸಮಾವೇಶದ ಕಲಾಪ ಪ್ರಾರಂಭವಾಯಿತು.

ಅಧ್ಯಕ್ಷ ಮಂಡಳಿ

ಇ.ಎಂ. ಎಸ್. ನಂಬೂದಿರಿಪಾದ್, ಸಿ. ರಾಜೇಶ್ವರರಾವ್, ಸೈಯದ್ ಷಹಬ್ ಬಾಷಿಮ್, ಶರದ್ ಪವಾರ್, ಚಂದ್ರಜೀತ್ ಯಾದವ್, ತ್ರಿದೀಪ್ ಚೌಧುರಿ, ಚಿತ್ತ ಬಸು, ಜಗಜೀವನ್ ರಾಂ–ಇವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಸಮಾವೇಶ ನಡೆಸಿಕೊಡಲು ಸೂಚಿಸಲಾಯಿತು.

ಇ. ಎಂ. ಎಸ್. ಕರೆ

ಅಧ್ಯಕ್ಷತೆ ವಹಿಸಿದ್ದ ಇ.ಎಂ.ಎಸ್. ನಂಬೂದಿರಿ ಪಾದ್ ರವರು ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ರಾಷ್ಟ್ರದಾದ್ಯಂತ ಶಾಂತಿ ಚಳುವಳಿಯನ್ನು ಬಲಪಡಿಸಲು ಕರೆ ನೀಡಿದರು. ಭಾರತದ ಜನತೆ ಈ ಚಳುವಳಿಯಲ್ಲಿ ಈಗ ಹಿಂದುಳಿದಿದ್ದರೂ, ಇನ್ನು ಮುಂದೆ ಪ್ರಪಂಚದಾದ್ಯಂತ ಬೆಳೆದು ಬರುತ್ತಿರುವ ಶಾಂತಿ ಚಳುವಳಿಯ ಒಂದು ಭಾಗವಾಗಲಿದ್ದಾರೆ ಎಂದು ಘೋಷಿಸಿದರು. ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನ ಸಮಾವೇಶಗೊಂಡಿರುವ ಈ ಶಾಂತಿ ಸಮಾವೇಶದ ಮಹತ್ವವನ್ನು ಮಹಿಳೆಯರೂ ಅರಿತು ಚಳುವಳಿಯಲ್ಲಿ ಧುಮುಕುವಂತೆ ಅವರು ಕೋರಿದರು.

ಪ್ರಪಂಚದಲ್ಲಿ ಶಾಂತಿ ನೆಲೆಸಲು ಸಾಮ್ರಾಜ್ಯಶಾಹಿಗಳೊಂದಿಗೆ ತೀವ್ರ ಪ್ರಯತ್ನ ನಡೆಸಿದ, ಇತ್ತೀಚೆಗೆ ನಿಧನರಾದ ಸೋವಿಯತ್ ಯೂನಿಯನ್ನಿನ ಅಧ್ಯಕ್ಷರಾಗಿದ್ದ ಕಾ. ಆಂದ್ರೊಪೋವ್ ರವರಿಗೆ ಸಮಾವೇಶವು ಸಂತಾಪ ಸೂಚಿಸಿತು.

ದೆಹಲಿ ಘೋಷಣೆ

"ದೆಹಲಿ ಘೋಷಣೆ" ಎಂಬ ಹೆಸರಿನಲ್ಲಿ ಸಮಾವೇಶಕ್ಕಾಗಿ ತಯಾರಿಸಲಾದ ಕರಡು ಮನವಿಯನ್ನು ಸಿಪಿಐ ಕಾರ್ಯದರ್ಶಿ ರಾಜೇಶ್ವರ್ ರಾವ್, ರವರು ಮಂಡಿಸಿದರು. ಅಮೇರಿಕಾದ ರೇಗನ್ ಸರಕಾರವು ತನ್ನ ನ್ಯಾಟೋ ಬಣದೊಂದಿಗೆ ಸೇರಿ ಸೋವಿಯತ್ ಯೂನಿಯನ್ ಮತ್ತು ಇತರ ಸಮಾಜವಾದಿ ದೇಶಗಳ ಮೇಲೆ ಗುರಿ ಇರಿಸಿ ಪರ್ಶಿಂಗ್-2 ಮತ್ತು ಕ್ರೂಯಿಸ್ ಕ್ಷಿಪಣಿಗಳನ್ನು ಪಶ್ಚಿಮ ಜರ್ಮನಿ, ಇಟಲಿ ಮತ್ತು ಬ್ರಿಟನ್ ದೇಶದಲ್ಲಿ ನೆಲೆ ಇರಿಸಿದೆ. ನಿಮಿಷಗಳ ಮಾತ್ರಗಳಲ್ಲಿ ಈ ಕ್ಷಿಪಣಿಗಳು ಸಮಾಜವಾದಿ ದೇಶಗಳ ಮೇಲೆ ಎರಗಬಹುದಾಗಿದೆ. ನಮ್ಮ ದೇಶವೂ ಸೇರಿದಂತೆ ಇಡೀ ಪ್ರಪಂಚದ ಜನತೆ ಇಂದು ಅಣುಯುದ್ಧ ತರಬಹುದಾದ ಸರ್ವನಾಶದ ಬೆದರಿಕೆಗೆ ಒಳಪಟ್ಟಿದೆ. ನಮ್ಮ ಭೂಮಂಡಳದಲ್ಲಿ ಜೀವರಾಶಿಯೇ ಉಳಿಯದಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ" ಎಂದು ತಿಳಿಸಿರುವ ಹೇಳಿಕೆಯು ಇಡೀ ಜಗತ್ತನ್ನು ಅಣು ಯುದ್ಧಕ್ಕೆ ಎಳೆದೊಯ್ಯುವ ಪರಿಸ್ಥಿತಿ ನಿರ್ಮಿಸಲು ರೇಗನ್ ಆಡಳಿತ ಮತ್ತು ಅದರ ನ್ಯಾಟೋ ಬಣಗಳೇ ಪೂರ್ಣ ಜವಾಬ್ದಾರಿ ಎಂದು ಸಾದರ ಪಡಿಸಿದೆ. ಹಿಂದುಳಿದ ದೇಶಗಳ ನೂರಾರು ಕೋಟಿ ಜನತೆ ಪೌಷ್ಠಿಕಾಂಶದ ಕೊರತೆ, ಬಡತನ ಮತ್ತು ರೋಗ ರುಜಿನಗಳಿಂದ ನರಳುತ್ತಿರುವಾಗ 600 ಸಾವಿರ ಕೋಟಿಗೂ ಮಿಕ್ಕಿ ಹಣವನ್ನು ಅಣು ಮತ್ತು ಇತರ ಅಸ್ತ್ರಗಳ ತಯಾರಿಕೆಗೆ ಅಪವ್ಯಯಗೊಳಿಸಲಾಗುತ್ತಿದ್ದು ಇದರ ವಿರುದ್ಧ ಹೋರಾಡಬೇಕೆಂದು ಕರೆ ಕೊಡುತ್ತಾ ನಿರ್ಣಯದಲ್ಲಿ ಸಾಮ್ರಾಜ್ಯ ಶಾಹಿ ಅಮೇರಿಕಾವು ಪ್ರಪಂಚದಾದ್ಯಂತ ತನ್ನ ಆಕ್ರಮಣ ನೀತಿಯನ್ನು ವಿಸ್ತರಿಸುತ್ತಿರುವ ಅಪಾಯದ ಬಗ್ಗೆ ಎಚ್ಚರಿಸಲಾಗಿದೆ. ಗ್ರೆನೆಡಾವನ್ನು ಈಗಾಗಲೇ ಆಕ್ರಮಿಸಿದೆ. ಪ್ರಜಾಪ್ರಭುತ್ವವಾದೀ ನಿಕರಾಗುವಾ, ಸಮಾಜವಾದಿ ಕ್ಯೂಬಾಗಳ ಮೇಲೆ ಅಮೇರಿಕ ಎರಗುವ ಬೆದರಿಕೆ ತಲೆದೋರಿದೆ. ಎಲ್ ಸಾಲ್ವಡೋರ್‌ನಲ್ಲಿ ಫ್ಯಾಸಿಸ್ಟ್ ಪ್ರಭುತ್ವದ ವಿರುದ್ಧ ನಡೆಯುತ್ತಿರುವ ಆಂದೋಳನವನ್ನು ಬುಡಮೇಲು ಮಾಡುವ ಪ್ರಯತ್ನವನ್ನು ಅಮೇರಿಕ ನೇರವಾಗಿ ಕೈಗೊಳ್ಳುತ್ತಿದೆ. ನಮೀಬಿಯಾ ಜನತೆಯ ಸ್ವಾತಂತ್ರ್ಯ

[8ನೇ ಪುಟ ನೋಡಿ]

ಬೆಂಗಳೂರು ಘಟನೆಯ ಕುರಿತು ಸಿಪಿಐ(ಎಂ) ಹೇಳಿಕೆ

ಸಿ. ಪಿ. ಐ (ಎಂ) ರಾಜ್ಯ ಘಟಕದ ಕಾರ್ಯದರ್ಶಿ ಕಾ. ಪಿ. ರಾಮಚಂದ್ರ ರಾವ್ ಅವರು ಬೆಂಗಳೂರಿನಲ್ಲಿ ನಡೆದ ಘಟನೆಯ ಕುರಿತು ಕೆಳ ಕಂಡ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಘಟಕ ಸೈಯ್ಯದ್ ಉಮರ್ (ಮುನ್ನಾ) ಎಂಬ ಯುವಕನ ಸಾವಿಗೆ ಕಾರಣರಾದ ಪೋಲೀಸರ ಕೃತ್ಯವನ್ನು ಖಂಡಿಸುತ್ತದೆ. ರಾಜ್ಯ ಸರಕಾರದ ಪೋಲೀಸ್ ನೀತಿಗೆ ವಿರುದ್ಧವಾಗಿ ಮೂರನೇ ದರ್ಜೆ ವಿಧಾನಗಳು ಬಳಕೆಯಾಗುತ್ತಲೇ ಇವೆ. ಸರ್ಕಾರ ಪೋಲೀಸ್ ಅಧಿಕಾರಿಗಳ ಮೇಲೆ ತನ್ನ ಹತೋಟಿಯನ್ನು ಬಿಗಿಮಾಡದಿದ್ದರೆ ಇಂಥ ಪ್ರಕರಣಗಳು ವಿಚ್ಛಿದ್ರಕಾರಿಗಳ ಮತ್ತು ಸರಕಾರವನ್ನುರುಳಿಸುವ ಪ್ರಯತ್ನ ನಡೆಸುತ್ತಿರುವವರು ಉಪಯೋಗ ಮಾಡಿಕೊಳ್ಳಲು ಅವಕಾಶವಾಗುತ್ತದೆ.

ಕಳೆದ ವಾರದ ಘಟನೆ ಪೋಲೀಸ್ ಠಾಣೆ ಇರುವ ಶಿವಾಜಿ ನಗರ ಪ್ರದೇಶದಲ್ಲಿ ಜನರ ಸ್ವಯಂ ಸ್ಫೂರ್ತಿಯ ಪ್ರತಿಭಟನೆಯಾಗಿ ಆರಂಭವಾದರೂ, ಆ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಮುಂದುವರಿಸಲು ಕಾಣದ ಕೈಯೊಂದು ಕೆಲಸ ಮಾಡಿದೆಯೆಂದು ಕಮ್ಯೂನಿಸ್ಟ್ ಪಕ್ಷ ಭಾವಿಸುತ್ತದೆ.

ಉದ್ರೇಕಕಾರಿ ಬರವಣಿಗೆಯಿಂದ ಕೂಡಿದ "ವಾಯ್ಸ್ ಆಫ್ ಕರ್ನಾಟಕ"ವನ್ನು ಉಚಿತವಾಗಿ ಒಂದು ಜನ ವಿಭಾಗವನ್ನು ಮತ್ತೊಂದು ಜನ ವಿಭಾಗದ ಮೇಲೆ ಎತ್ತಿ ಕಟ್ಟುವ ಸ್ಪಷ್ಟ ಉದ್ದೇಶದಿಂದಲೇ ಹಂಚಿದ್ದು ಮತ್ತು ಸಿಟಿ ಮಾರ್ಕೆಟ್ ಬಳಿ ತಾ 12 ರಂದು ರಾತ್ರಿ 7 ಗಂಟೆಯಿಂದ 8 ರವರೆಗೆ ಸಂಘಟಿತ ಗೂಂಡಾಗಳ ತಂಡ ಅಪಾಯಕಾರಿ ಆಯುಧಗಳನ್ನು ಹಿಡಿದು ಸಾರ್ವಜನಿಕ ಆಸ್ತಿಯ ಮೇಲೆ ನಡೆಸಿದ ಹಲ್ಲೆ ಸಮಾಜ ವಿರೋಧಿ ಶಕ್ತಿಗಳ ಉದ್ದೇಶದ ಬಗ್ಗೆ ಸ್ಪಷ್ಟ ನಿದರ್ಶನ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಇಡೀ ಪ್ರಕರಣದ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸುವ ಮುಖ್ಯ ಮಂತ್ರಿಗಳ ನಿರ್ಧಾರವನ್ನು ಸ್ವಾಗತಿಸುತ್ತದೆ. ಅಲ್ಪ ಸಂಖ್ಯಾತ ಜನ ವಿಭಾಗ ಉದ್ರೇಕ ಕಾರಿ ಗಾಳಿ ಮಾತುಗಳಿಗೆ ಕಿವಿಗೊಡದೆ ಶಾಂತಿಯನ್ನು ಕಾಯ್ದು ಕೊಳ್ಳಬೇಕೆಂದು ಮತ್ತು ಎಲ್ಲ ಜನವಿಭಾಗಗಳೂ ಶಾಂತಿಯನ್ನು ಸ್ಥಾಪಿಸುವಲ್ಲಿ ನೆರವಾಗಬೇಕೆಂದೂ ಕರೆಕೊಡುತ್ತದೆ

ಪೋಲೀಸ್ ಠಾಣೆಗಳಲ್ಲಿ ಕೊಲೆಗಳು ನಿಲ್ಲಲೇ ಬೇಕು

ಕಳವು, ದರೋಡೆ ಕೊಲೆಗಳ ಮಾಹಿತಿ ಪಡೆಯಲು ಪೋಲೀಸರಿಂದ ಚಿತ್ರ ಹಿಂಸೆ ನಡೆಯುತ್ತಲೇ ಇದೆ. ಬ್ರಿಟಿಷರ ಆಳ್ವಿಕೆಯಲ್ಲಿ ಹಾಗೆಯೇ ಇಂದಿರಾ ಗಾಂಧಿಯ ಆಳ್ವಿಕೆಯಲ್ಲಿ ಕೂಡ ರಾಜಕೀಯ ಮುಖಂಡರ, ಕಾರ್ಯಕರ್ತರ ಮೇಲೆ ಪೋಲೀಸ್ ಠಾಣೆಗಳಲ್ಲಿ ಚಿತ್ರ ಹಿಂಸೆ ನಡೆದಿವೆ. ಹಲವಾರು ಜನ ಹಿಂಸೆಗೆ ತುತ್ತಾಗಿ ಮರಣವನ್ನಪ್ಪಿದಾರೆ. ಚಿತ್ರ ಹಿಂಸೆಯಿಲ್ಲದೆ ಗುನ್ಹೆಗಳನ್ನು ತಪಾಸಿಸಲು ಶಕ್ಯವಿಲ್ಲ, ಮಾಹಿತಿ ದೊರೆಯುವುದಿಲ್ಲೆಂದು ಪೋಲೀಸರ ವಾದ ಈ ವಾದದಲ್ಲಿ ಹುರುಳಿಲ್ಲ. ಚಿತ್ರ ಹಿಂಸೆ ಗೊಳಗಾದದವರು ನೋವು ಸಹಿಸಲಾರದೆ ಪೋಲೀಸರ ಮುಂದೆ ತಪ್ಪನ್ನೊಪ್ಪಿ ಕೊಂಡು ಕೋರ್ಟಿನಲ್ಲಿ ನಿಜಸಂಗತಿ ಬಹಿರಂಗ ಗೊಳಿಸಿರುವ ಹಲವಾರು ಘಟನೆಗಳು ದಾಖಲೆಯಲ್ಲಿವೆ.

ಕಾಂಗ್ರೆಸ್ ಆಳುವ ರಾಜ್ಯಗಳಲ್ಲಿ ಈ ರೀತಿಯ ಚಿತ್ರ ಹಿಂಸೆಯು ಇನ್ನೂ ಮುಂದುವರಿಯುತ್ತಿರುವಾಗ, ಪಶ್ಚಿಮ ಬಂಗಾಲ, ತ್ರಿಪುರಗಳಲ್ಲೂ ಹಾಗೆಯೇ ಕರ್ನಾಟಕದಲ್ಲಿ ಪೋಲೀಸರು ಹಳೆ ಕ್ರಮಗಳನ್ನು ಬಿಟ್ಟು ಕೊಡಬೇಕೆಂಬ ಆದೇಶ ನೀಡಲಾಗಿದೆ. ಹೋದ ವರ್ಷ ಬಳ್ಳಾರಿಯಲ್ಲಾದ ಘಟನೆಯ ನಂತರ ಕರ್ನಾಟಕದ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಪೋಲೀಸರು ಚಿತ್ರ ಹಿಂಸೆಗೆ ಅವಕಾಶ ಮಾಡಿ ಕೊಡಬಾರದೆಂಬ ಎಚ್ಚರಿಕೆಯನ್ನಿತ್ತಿದ್ದರು. ಆದರೆ ತಾ 10 ರಂದು ಬೆಂಗಳೂರಿನ ಶಿವಾಜಿನಗರ ಪೋಲೀಸ್ ಠಾಣೆಯಲ್ಲಾದ ಘಟನೆ ನೋಡುವಾಗ ಪೋಲೀಸ್ ನೀತಿಯಲ್ಲಿ ಯಾವುದೇ ಬದಲಾವಣೆಯಾದಂತೆ ಕಂಡುಬರುವುದಿಲ್ಲ.

ಬಳ್ಳಾರಿ ಮತ್ತು ದೇವ ಸಮುದ್ರ ಗೋಲೀಬಾರಿನ ಕುರಿತು ನ್ಯಾಯಾಂಗ ವರದಿ ಪ್ರಕಟವಾಗಿದ್ದು, ಅದರಲ್ಲಿ ಪೋಲೀಸ್ ಅಧಿಕಾರಿಗಳನ್ನು ಕರ್ತವ್ಯ ಲೋಪಕ್ಕೆ ಗುರಿಪಡಿಸಲಾಗಿದೆ. ಹುಡುಗಿಯ ಮೇಲೆ ಅತ್ಯಾಚಾರ ಮಾಡಿದ ಪೋಲೀಸರನ್ನು ಕೂಡಲೇ ಸಸ್ಪೆಂಡ್ ಮಾಡಿದ್ದರೆ ಬಳ್ಳಾರಿಯ ಭಯಾನಕ ಘಟನೆ ತಪ್ಪಿಸಬಹುದಿತ್ತು.

(8ನೇ ಪುಟ ನೋಡಿ)

"ಎನ್ಕೆ"

ಕರ್ನಾಟಕ ರಾಜ್ಯದಲ್ಲಿ

ನಂಜುಂಡಸ್ವಾಮಿಯವರ ಫರಮಾನ್

ಫರಮಾನ್ ಹೊರಡಿಸುತ್ತಿದ್ದ ರಾಜಾ ಮಹಾರಾಜರೂ, ಬಾದಶಾಗಳೂ ಅಳಿದು ಹೋಗಿದ್ದಾರೆ. ಅವರ ಜಾಗದಲ್ಲಿ ಫರಮಾನ್ ಹೊರಡಿಸುವ ಹೊಸ ರಾಜ ಹುಟ್ಟಿ ಬಂದಂತೆ ಕಾಣುತ್ತದೆ. ಅವನೇ ರುದ್ರಪ್ಪನವರ ರೈತ ಸಂಘದ ಕಾರ್ಯದರ್ಶಿ ನಂಜುಂಡಸ್ವಾಮಿ.

ಹೆಗಡೆ ಸರಕಾರ ಉರುಳಿಸುವ ಸಂಚಿನಲ್ಲಿ ಮೊಯಿಲಿ ಗ್ಯಾಂಗಿಗೆ ಸಹಾಯ ಮಾಡಲು ಹೆಗಡೆ ಹಟಾವೊ ಘೋಷಣೆಯೊಂದಿಗೆ ರಸ್ತಾ ರೋಕೋ ರೇಲ್ ರೋಕೋ ಕಾರ್ಯಕ್ರಮ ಮಾಡಿ ಅದಕ್ಕೆ ಜನ ಬೆಂಬಲ ಕಡಿಮೆಯಾದಾಗ, ತಮ್ಮ ಊರ ಜನರೇ ಅಂಥ ಚಳುವಳಿಗೆ ಛೀಮಾರಿ ಹಾಕಿದಾಗ, ಅದನ್ನು ವಾಪಸ್ ಪಡೆದು ಈಗ ಶಾಸಕರಿಗೆಲ್ಲ ಹೊಸ ಫರಮಾನ್ ಹೊರಡಿಸಿದಾರೆ ಈ ಮಹಾಶಯ. ನೇಗಿಲ ಹಿಡಿಯುವುದು, ಬೀಜ ಬಿತ್ತುವುದು, ಕಳೆ ತೆಗೆಯುವುದು, ರಾಶಿ ಮಾಡುವುದು—ಇವುಗಳ ಸ್ವಂತ ಅನುಭವವಿಲ್ಲದಿದ್ದರೂ, ತನ್ನ ಸಂಘದ ಬೇಡಿಕೆಗಳ ಬಗ್ಗೆ ತಮ್ಮ ನಿಲುವನ್ನು ಮಾರ್ಚ್ 14 ರೊಳಗೆ ತಿಳಿಸದಿದ್ದರೆ, ತಾ 15 ರಿಂದ ಅವರನ್ನೆಲ್ಲ ಘೆರಾವೊ ಮಾಡಲಾಗುವುದೆಂಬ ಎಚ್ಚರಿಕೆಯ ನೋಟೀಸುಗಳು ಎಲ್ಲ ಶಾಸಕರಿಗೆ ರವಾನೆಯಾಗಿವೆಯಂತೆ. ರೈತ ವಿರೋಧಿ ಹೆಗಡೆ ಸರಕಾರಕ್ಕೆ ಕೊಡುತ್ತಿರುವ ಬೆಂಬಲವನ್ನು ವಾಪಸ್ ಪಡೆಯಬೇಕೆಂದೂ, ರೈತರಿಗಾಗಿ ಶಾಸಕರು ಮಾಡಬೇಕಾದ ಕನಿಷ್ಠ ಕರ್ತವ್ಯವಿದೆಂದೂ ಬುದ್ಧಿ ಮಾತು ಹೇಳಿದ್ದಾರೆ.

ರಾಜ್ಯದ ರೈತರ ಬೇಡಿಕೆಗಳಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಪ್ರಾಂತ ರೈತ ಸಂಘ, ಸಿ.ಐ.ಟಿ.ಯು ತನ್ನ ಸಂಪೂರ್ಣ ಬೆಂಬಲ ನೀಡಿ, ರೈತರ ಬೆಳೆಗೆ ನ್ಯಾಯ ಬೆಲೆ, ಕೃಷಿ ಕಾರ್ಮಿಕರಿಗೆ ಹೆಚ್ಚು ವೇತನ, ಬಡ-ಮಧ್ಯಮ ವರ್ಗದ ರೈತರ ಸಾಲ ಮನ್ನಾ ಮಾಡುವುದು, ಕಡಿಮೆ ಬಡ್ಡಿಯಲ್ಲಿ ಸಾಲ ಮಂಜೂರಾತಿ, ಹೆಚ್ಚುವರಿ ಭೂಮಿಯ ಪುಕ್ಕಟೆ ಹಂಚಿಕೆ ಮೊದಲಾದ ರೈತರ ಸಮಸ್ಯೆಗಳ ಪೂರೈಕೆಗಾಗಿ ಹೋರಾಟಗಳನ್ನೂ ನಡೆಸುತ್ತಿವೆ. ಆದರೆ ನಂಜುಂಡಸ್ವಾಮಿಯವರ ಬೇಡಿಕೆಗಳಲ್ಲಿ ಕೆಲವು ಸಮರ್ಪಕವಾಗಿರವುದಿಲ್ಲ. ಅವುಗಳಿಗೆ ಬೆಂಬಲ ನೀಡುವ ಅಥವಾ ಹೆಗಡೆ ಸರಕಾರಕ್ಕೆ ಸಿಪಿಐ (ಎಂ) ಶಾಸಕರು ಬೆಂಬಲ ನಿರಾಕರಿಸುವ ಪ್ರಶ್ನೆ ಉದ್ಭವಿಸುವುದೇ ಇಲ್ಲ. ನಂಜುಂಡಸ್ವಾಮಿಯವರ ಚಳುವಳಿಯ ನೀತಿಯಾಗಲೀ, ಭೂಮಾಲಕ ಪರ, ಹಳ್ಳಿ [illegible] ಜನರೊಳಗೆ ಜಗಳ ಉಂಟು ಮಾಡುವ ಬೇಡಿಕೆಗಳಾಗಲೀ ನಮ್ಮ ಬೆಂಬಲವಿಲ್ಲ.

ಹೆಗಡೆ ಸರಕಾರವನ್ನು ಉರುಳಿಸಿಯೇ ತೀರುತ್ತೇವೆಂಬ ಪಣ ತೊಟ್ಟವರು ಇಂದಿರಾಗಾಂಧಿ. ನಂಜುಂಡಸ್ವಾಮಿ ಇಂದಿರಾಗಾಂಧಿಯ ಆದೇಶದಂತೆ ಫರಮಾನ್ ಹೊರಡಿಸಿ ಎರಡನೇ ಹಂತದ ಚಳುವಳಿ ಪ್ರಾರಂಭಿಸುತ್ತಿದ್ದಾರೆ. ಇಂಥ ಚಳುವಳಿಯನ್ನು ಜನತೆ ಎದುರಿಸಬೇಕು, ವಿರೋಧಿಸಬೇಕು, ಸೋಲಿಸಬೇಕು. ಪ್ರಜಾಪ್ರಭುತ್ವ ಉಳಿಯುವಿಕೆಗೆ ಈ ಕ್ರಮ ಅತ್ಯಗತ್ಯ. ನಂಜುಂಡಸ್ವಾಮಿಯ ಹುಕುಮನ್ನ ಹತ್ತಿಕ್ಕಿರಿ. ರೈತ ಚಳುವಳಿ ಅವರ ಗುತ್ತಿಗೆಯಲ್ಲ.

ಗುಂಡೂರಾವ್ - ಕತ್ತಲೆಯಿಂದ ಬೆಳಕಿಗೆ

ಮೂರು ವರ್ಷ ಮುಖ್ಯಮಂತ್ರಿಯಾಗಿ ರಾಜ್ಯವಾಳಿದ ಗುಂಡೂರಾಯರು ಚುನಾವಣೆಯಲ್ಲಿ ಮತದಾರರಿಂದಲೇ ವನವಾಸಕ್ಕೆ ಅಟ್ಟಲ್ಪಟ್ಟಿದ್ದರು. ಒಂದು ವರ್ಷ ಕತ್ತಲೆಕೋಣೆಯಲ್ಲಿ. ವೀಡಿಯೋ ನೋಡುತ್ತಿದ್ದ ರಾಯರು ಒಂದೇ ಸಮನೆ ಮದ್ರಾಸಿನಲ್ಲಿ ಕಂಡು ಬಂದರು. ಸಂದರ್ಭ, ಸಿನಿಮಾ ನಟ ಶಿವಾಜಿ ಗಣೇಶನ್ ಬೆಂಬಲಿಗರ ಸಭೆಯಲ್ಲಿ. ತಮಿಳುನಾಡಿನ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಶಿವಾಜಿ ಗಣೇಶನ್ ಅವರಿಗೆ ಕೊಡಿಸಬೇಕೆಂದು ಒತ್ತಾಯಿಸಲು ಈ ಸಮಾವೇಶ ಸೇರಿತ್ತು. ಅಧಿಕೃತ ಅಧ್ಯಕ್ಷರ ವಿರುದ್ಧ ಬಂಡಾಯವೆದ್ದಿರುವ ಈ ಸಮ್ಮೇಳನದಲ್ಲಿ ಗುಂಡೂರಾಯರ ಹಾಜರಿ; ಅಷ್ಟೇ ಅಲ್ಲ ಶಿವಾಜಿ ಗಣೇಶನ್ ಪರವಾಗಿ ಭಾಷಣ, ದಿಲ್ಲಿಯಲ್ಲಿಯೂ ವಾದಿಸುವುದಾಗಿ ವಾಗ್ದಾನ. ಇದರಲ್ಲೇನೋ ಒಳಸಂಚು ಕಂಡು ಬರುತ್ತಿಲ್ಲವೇ ?

ಮೊನ್ನೆ ಬೆಳಗಾವಿಯಲ್ಲಿ ಮಂತ್ರಿ ಮಹಾಶಯರ ಸಂಬಂಧಿಕರ ಮದುವೆಗೆ ಹೋದ ಗುಂಡೂರಾಯರು ದಿಲ್ಲಿ ಪ್ರಯಾಣ ಬೆಳೆಸಿದ್ದಾರಂತೆ. ಹೆಗಡೆ ಸರಕಾರ ಉರುಳಿಸುವ ಒಳಸಂಚನ್ನೆಲ್ಲ ಒಳನೋಟದಿಂದಲೇ ತೀಕ್ಷ್ಣವಾಗಿ ಈಕ್ಷಿಸುತ್ತ ಬಂದ, ಸಾಧ್ಯವಾದಲ್ಲೆಲ್ಲ, ಅಂಥ ಒಳಸಂಚನ್ನು ವಿಫಲಗೊಳಿಸಲು ಅಲ್ಪ ಸೇವೆ ಸಲ್ಲಿಸಿ, ವೀರಪ್ಪ ಮೊಯಿಲಿ, ಕೆ. ಎಚ್. ಪಾಟೀಲ ಗುಂಪು "ಕೆಡವುವ" ಕಾರ್ಯಕ್ರಮದಲ್ಲಿ ವಿಫಲರಾಗಿದ್ದಾರೆಂಬುದನ್ನು ದಿಲ್ಲಿ ರಾಣಿಗೆ ಖಾತ್ರಿ ಮಾಡಿಸಿ, "ತನ್ನಿಂದಲೇ ಆ ಮಹಾಕಾರ್ಯ ಕೈಗೂಡೀತು... ನಾನೇ ಕರ್ನಾಟಕದಲ್ಲಿ ಕಾಂಗ್ರೆಸ್ಸನ್ನು ಉಳಿಸುವವ. ಅದನ್ನು ಅಧಿಕಾರಕ್ಕೆ ತರುವವ" ಎಂಬುದನ್ನು ಖಾತ್ರಿ ಮಾಡಿ ತೋರಿಸಲು ದಿಲ್ಲಿ ಯಾತ್ರೆ ಕೈಗೊಂಡಿದ್ದಾರೆ. ಸಂಜಯ ಗಾಂಧಿಯ ನಿಕಟವರ್ತಿಯಾಗಿದ್ದ ರಾಯರು ಈಗ ರಾಜೀವನ ಕೃಪಾಕಟಾಕ್ಷಕ್ಕೆ ಒಳಗಾಗಿದ್ದಾರಂತೆ. ರೈತರನ್ನೂ ಕೊಂದು ಸಮರ್ಥರೀತಿಯಿಂದ ರಾಜ್ಯವಾಳಿದ ಗುಂಡಣ್ಣ ಇಂದಿಗೂ ಇಂದಿರಾ "ಒಳ ಗುಂಪಿ"ನಲ್ಲಿ ಸ್ಥಾನ ಉಳಿಸಿಕೊಂಡಿದ್ದಾರಂತೆ. ಹೆಗಡೆ ಸರಕಾರ ಉರುಳಿಸುವುದರಲ್ಲಿ ಬೂಟಾಸಿಂಗ್, ಶಾಲಿನೀ ತಾಯಿ, ಮೊಯಿಲಿಯಂಥವರೆಲ್ಲ ಸೋತಿದ್ದಾರೆ. ಹೆಗಡೆ ಸರಕಾರ ಹೋಗದಿದ್ದರೆ ಲೋಕಸಭೆ ಚುನಾವಣೆಯಲ್ಲಿ ಗೆಲುವಿಗೆ ಅಪಾಯ. ಒಂದೆಡೆ ದುಡ್ಡಿನ ಬಲ, ಮತ್ತೊಂದೆಡೆ ಅಶಾಂತಿ. ನಂಜುಂಡಸ್ವಾಮಿ, ಡಾ|| ರಾಜಕುಮಾರನ ಬೆಂಬಲಿಗರೆನ್ನಿಸಿಕೊಳ್ಳುವವರು ಅಶಾಂತಿ ಎಬ್ಬಿಸುತ್ತಾರೆ. ದುಡ್ಡಿನ ಬಲದಿಂದ ಪಕ್ಷಾಂತರ ಗೊಳಿಸುತ್ತೇನೆ–ಇದುವೇ ಮುಖ್ಯಮಂತ್ರಿ ಗುಂಡೂರಾಯರ ಶಕುನಿ ತಂತ್ರ. ಜನತಂತ್ರ ಬಲಿಷ್ಠವಾಗಿರುವಾಗ ಶಕುನಿತಂತ್ರ ಫಲಿಸದು. ಆದಗೂ ಕೂಡ ಕೇಂದ್ರದ ಕೊಡಲಿಯೇಟು ತಡೆಯಲು ಜನರು ಸಿದ್ಧರಿರಬೇಕು..

ನೇಮಕಾತಿ ಸಮಿತಿಗಳು

ಸಮತಾವಾದಿ ಸಮಾಜದಲ್ಲಿ ನೇಮಕಾತಿ ಸಮಿತಿಗಳ ಅವಶ್ಯಕತೆಯಿಲ್ಲ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿರುವ ಪಶ್ಚಿಮ ಬಂಗಾಲದ ಎಡರಂಗ ಸರಕಾರ ನೇಮಕಾತಿ ಸಮಿತಿಗಳನ್ನು ನೇಮಿಸುವ ಗೊಡವೆಗೆ ಹೋಗಿಲ್ಲ. ಆದರೆ ಬಂಡವಾಳ ಶಾಹಿ ಪಕ್ಷಗಳು ಆಳುವ ರಾಜ್ಯಗಳಲ್ಲಿ ಬೇರೆ ಬೇರೆ ಇಲಾಖೆಗಳಿಗೆ ನೌಕರರನ್ನು ನೇಮಿಸಲು ನೇಮಕಾತಿ ಸಮಿತಿಗಳನ್ನು ನೇಮಿಸಲಾಗುತ್ತಿದೆ. ತಂತಮ್ಮ ಪಕ್ಷಗಳಲ್ಲಿ ಅಸಂತುಷ್ಟರಾಗಿರುವ ಸದಸ್ಯರನ್ನು ಸಮಾಧಾನ ಮಾಡುವ ಸಲುವಾಗಿ, ಹಾಗೆಯೇ ವಿದ್ಯಾರ್ಹತೆಯಲ್ಲಿ ಕೆಳಮಟ್ಟದಲ್ಲಿದ್ದರೂ, ಅಂಥವರಿಗೆ ಉದ್ಯೋಗವಕಾಶ ಒದಗಿಸುವ ದೃಷ್ಟಿಯಿಂದಲೇ ಇಂಥ ಕ್ರಮ ಕೈಗೊಳ್ಳಲಾಗುತ್ತಿದೆ. ಇದರಿಂದಾಗಿ ಭ್ರಷ್ಟಾಚಾರಕ್ಕೆ ಅವಕಾಶ ಮಾತ್ರವಲ್ಲದೆ ವಿದ್ಯಾವಂತ ಯುವಕರಿಗೆ ಅನ್ಯಾಯವೂ ಆಗುತ್ತದೆ.

ಹಿಂದಿನ ಸರಕಾರದಲ್ಲಿ ಕೂಡ ಇಂಥ ಸಮಿತಿಗಳು ಭ್ರಷ್ಟಾಚಾರದ ಆಗರಗಳಾಗಿದ್ದವು. ಹಿಂದಿನ ಗುಂಡೂರಾವ್ ಸರಕಾರ ಕೂಡ ಭ್ರಷ್ಟಾಚಾರದ ಕೂಗಿಗೆ ಕಿವಿಕೊಟ್ಟು ನೇಮಕಾತಿ ಸಮಿತಿಗಳನ್ನು ರದ್ದು ಮಾಡಿ, ಪರೀಕ್ಷೆಯಲ್ಲಿ ಪಡೆದ ಅಂಕಗನುಸಾರ ನೇಮಕಾತಿ ಮಾಡುವ ಪದ್ಧತಿ ಅನುಷ್ಠಾನದಲ್ಲಿ ತಂದಿತು. ಯಾವ ತೊಂದರೆ ಇಲ್ಲದೆ ಮನೆ ಬಾಗಿಲಿಗೇನೇ ನೇಮಕಾತಿ ಆಜ್ಞೆಗಳು ಬಂದು ಸೇರುತ್ತಿದ್ದವು.

ಜನತಾ ಸರಕಾರ ಅಸ್ತಿತ್ವದಲ್ಲಿರುವುದರಿಂದ ಭ್ರಷ್ಟಾಚಾರ ಸ್ವಲ್ಪ ಮಟ್ಟಿಗಾದರೂ ಅಳಿದಿರಬೇಕೆಂದು ಭಾವಿಸಲಾಗಿತ್ತು. ನೇಮಕಾತಿ ಸಮಿತಿಗಳಲ್ಲಿರುವ ಜಪಕಾ, ಭಾಜಪ, ಕಾಂಗ್ರೆ ಸದಸ್ಯರೆಲ್ಲ ಯಾವ ಅಂಜಿಕೆ ಇಲ್ಲದೆ ರೂ. ಐದು ಸಾವಿರದಿಂದ ಹತ್ತು ಸಾವಿರದ ವರೆಗೆ ಲಂಚತಿಂದಿದ್ದಾರೆಂಬ ಆರೋಪ ಇತ್ತೀಚೆಗೆ ಬೆಳಗಾವಿ-ಧಾರವಾಡಗಳಲ್ಲಿ ಪ್ರಾಥಮಿಕ ಶಿಕ್ಷಕರನ್ನು ನೇಮಿಸುವಾಗ ಕೇಳಿ ಬಂದ ಸುದ್ದಿ. ಇಂಥ ತಕರಾರುಗಳನ್ನು ಪರಿಶೀಲಿಸಿ ಶಿಕ್ಷಕರ ನೇಮಕಾತಿ ಸಮಿತಿಗಳನ್ನೆಲ್ಲ ರದ್ದು ಪಡಿಸಿರುವುದು ಸ್ವಾಗತಾರ್ಹ. ಇತರ ನೇಮಕಾತಿ ಸಮಿತಿಗಳನ್ನೂ ರದ್ದು ಮಾಡಿದರೆ ಒಳಿತು. ಇಲ್ಲವಾದರೆ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಗಳನ್ನು ನೇಮಿಸಬೇಕು ಅಥವಾ ಈಗಿರುವ ಮೀಸಲಾತಿ ನಿಯಮಕ್ಕನುಸಾರವಾಗಿ ಆಯಾ ವರ್ಗಗಳಲ್ಲಿ ಪ್ರತಿಭೆಗೆ ಪುರಸ್ಕಾರನೀಡಿ ಅರ್ಹತೆಗನುಸಾರ ನೇಮಿಸುವುದು ಭ್ರಷ್ಟಾಚಾರತೊಡೆದು ಹಾಕಲು ಒಂದೇ ಉಪಾಯ. ಭ್ರಷ್ಟಾಚಾರ ಅಳಿಯಲೇ ಬೇಕು. ಭ್ರಷ್ಟಾಚಾರಕ್ಕೆ ಪೋಷಕವಾಗಿರುವ ನೇಮಕಾತಿ ಸಮಿತಿಗಳು ರದ್ದಾಗಬೇಕು.

ಭ್ರಷ್ಟಾಚಾರದ ರೊಚ್ಚು ಗುಂಡಿಗಳು.

ಈ ಸಲದ ವಿಧಾನ ಸಭೆಯಲ್ಲಿ ಹಲವಾರು ಜೀವಂತ ಸಮಸ್ಯೆಗಳ ಜೊತೆಯಲ್ಲಿ ಹೆಚ್ಚು ಗಮನ ಸೆಳೆದ ವಿಷಯ "ಭ್ರಷ್ಟಾಚಾರ." ಲೋಕೋಪಯೋಗಿ, ಸಹಕಾರ, ಹಾಗೆಯೇ ಸರಕಾರದ ಪ್ರತಿಯೊಂದು ಖಾತೆಯಲ್ಲಿಯೂ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆಂಬ ಆರೋಪವನ್ನು ಜನತಾ ಮಂತ್ರಿಗಳೇ ಒಪ್ಪಿಕೊಂಡಿರುವುದೂ ಅವುಗಳ ನಿವಾರಣೆಗಾಗಿ ಕ್ರಮಕೈಗೊಳ್ಳಲಾಗುವುದೆಂಬ ಆಶ್ವಾಸನೆಗಳು ವಿಧಾನ ಸಭೆಯಲ್ಲಿ ಕೇಳಿಬಂದಿರುವುದೂ ಸ್ವಾಗತಾರ್ಹ. "ಸಹಕಾರಿ ಸಂಘಗಳು ಭ್ರಷ್ಟಾಚಾರದ ರೊಚ್ಚು ಗುಂಡಿಗಳು" ಎಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಬಣ್ಣಿಸಿದ್ದರು. ಇದರ ಜೊತೆಯಲ್ಲಿಯೇ ತಮ್ಮ ಸರಕಾರದಲ್ಲಿ "ರಾಜಕೀಯ" ಭ್ರಷ್ಟಾಚಾರ ತಡೆಹಿಡಿಯಲ್ಪಟ್ಟಿದೆಂದೂ ಸಾರಿದ್ದಾರೆ. ರಾಜಕೀಯ ಭ್ರಷ್ಟಾಚಾರ ವಿಲ್ಲದೆ ಕೆಳಮಟ್ಟದಲ್ಲಿ ಭ್ರಷ್ಟಾಚಾರ ಮುಂದುವರಿಯಲು ಸಾಧ್ಯವೇ ಇಲ್ಲ. ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಒಂದಕ್ಕೊಂದು ಸಂಬಂಧ ವಿದ್ದೇ ಇದೆ.

ಲೋಕೋಪಯೋಗಿ ಖಾತೆಯಲ್ಲಿ ಕಂಟ್ರಾಕ್ಟರರು ಮತ್ತು ಅಧಿಕಾರಿಗಳನ್ನು ಶಿಕ್ಷೆಗೊಳಪಡಿಸುವ ಕಾನೂನು ಮಾಡಲಾಗುವುದೆಂದು ವಿಧಾನಸಭೆಯಲ್ಲಿ ಮಂತ್ರಿಗಳು ಸಾರಿದರು.

ಸಹಕಾರಿ ಸಂಘಗಳು ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದಲ್ಲಿವೆ. ಅವು ಅನೀತಿ, ಅಕ್ರಮಗಳ ತವರು, ರಾಜಕೀಯ ಪ್ರತಿಷ್ಠೆ ಬೆಳೆಸಲು ಒಂದು ಸಾಧನ. ಸಹಕಾರಿ ಸಂಘಗಳು ಬಡವರ ಹಿತಸಾಧನೆಯ ಅಂಗಗಳಾಗಬೇಕಾದರೆ ಈಗಿರುವ ಸಂಘಗಳಿಗೆ ಶಸ್ತ್ರಕ್ರಿಯೆ ಆಗಲೇ ಬೇಕು. ಮುಂದಿನ ಶಾಸನ ಸಭೆಯಲ್ಲಿ ತಾನು ತರಲಿಚ್ಛಿಸುವ ತಿದ್ದುಪಡಿಗಳು ಇಚ್ಛಿತ ಕಾಯಕಲ್ಪ ಒದಗಿಸಬಹುದೆಂಬ ಆಶಯವನ್ನು ಸಹಕಾರ ಮಂತ್ರಿಗಳು ವ್ಯಕ್ತ ಮಾಡಿದ್ದಾರೆ.

ಶಿಕ್ಷಣ ಮಂತ್ರಿಗಳು ಶಿಕ್ಷಕರ ನೇಮಕಾತಿ ಸಮಿತಿಗಳನ್ನೆಲ್ಲ ರದ್ದು ಮಾಡುವ ಕ್ರಮಕೈಗೊಂಡಿದ್ದಾರೆ.

ಭ್ರಷ್ಟಾಚಾರ ಅಸ್ತಿತ್ವದಲ್ಲಿದೆ, ಅದನ್ನು ತೊಡೆದು ಹಾಕಬೇಕೆಂಬ ಮಾತು ಜನತಾ ಮಂತ್ರಿಗಳ ಬಾಯಿಯಿಂದ ಕೇಳಿಬರುತ್ತಿರುವುದು ಸ್ವಾಗತಾರ್ಹ. ಹಿಂದಿನ ಸರಕಾರ ಭ್ರಷ್ಟಾಚಾರ ಇದೆಂಬುದನ್ನೇ ಒಪ್ಪಿಕೊಳ್ಳುತ್ತಿದ್ದಿಲ್ಲ. ಕಾಂಗ್ರೆಸ್ ಮೂಲದ ಜನರೇ ಜನತಾದಲ್ಲಿ ತುಂಬಿರುವುದರಿಂದ ಭ್ರಷ್ಟಾಚಾರ ಅಳಿಯುತ್ತದೆಂಬ ಭ್ರಮೆ ನಮಗಿಲ್ಲ. ಭ್ರಷ್ಟಾಚಾರ ತೆಗೆದು ಹಾಕಲು ತೀವ್ರ ಕ್ರಮ ಕೈಗೊಳ್ಳುವುದು ಅಗತ್ಯ. ಇದಾಗಬೇಕಾದರೆ ಜನತೆ, ಸಮಾಜ, ಸರಕಾರ ಬದಲಾಗಬೇಕು. ಬರೇ ಕಾನೂನು ಗಳಿಂದಷ್ಟೇ ಸಮಸ್ಯೆಗೆ ಪರಿಹಾರ ಸಿಗಲಾರದು. ಈಗಾದರೂ ಕೂಡ ಭ್ರಷ್ಟಾಚಾರ ತಡೆ ಹಿಡಿಯಲು ಕಾಯಿದೆ–ಕಾನೂನುಗಳಿಗೇನೂ ಕೊರತೆಯಿಲ್ಲ. ಆದರೆ ನಿಷ್ಠೆಯಿಂದ ಅವುಗಳ ಅನುಷ್ಠಾನ ಅಗತ್ಯ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯದೆ, ಜನರು ರಾಜಕೀಯವಾಗಿ ಹೋರಾಡಲು ಮುಂದಾಗದಿದ್ದರೆ ಇಂಥ ರೋಗಗಳಿಗೆ ಕಾಯಕಲ್ಪ ಕಂಡು ಹಿಡಿಯಲು ಶಕ್ಯವಿಲ್ಲ.

ಮಂತ್ರಿ ವಿಶ್ವನಾಥ ರೆಡ್ಡಿಯವರು ತಿದ್ದಿಕೊಳ್ಳಲಿ

ಪಶು ಸಂಗೋಪನಾ ಸಚಿವರಾದ ವಿಶ್ವನಾಥ ರೆಡ್ಡಿಯವರು ಇತ್ತೀಚೆಗೆ ಯಲಬುರ್ಗಾ, ಕೊಪ್ಪಳಗಳಲ್ಲಿ ಸಂಚರಿಸಿದಾಗ, ಹಲವಾರು ವೇದಿಕೆಗಳಲ್ಲಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರನ್ನು ಹೀಯಾಳಿಸಿರುವುದು ಖಂಡನೀಯ. ಕೆಳವರ್ಗದ ಜನರ ಸಮಸ್ಯೆಗಳ ಕುರಿತು ಮನವಿ ಅರ್ಪಿಸಿದಾಗ, ಅದನ್ನ ಸ್ವೀಕಾರ ಮಾಡಿ, ಪರಿಹಾರ ಕಂಡು ಹಿಡಿಯುತ್ತೇನೆಂದು ಹೇಳದೆ, ಭಿಕ್ಷಾ ಪಾತ್ರೆ ಹಿಡಿದು ಕಾರ್ಖಾನೆಗಳಿಗೆ ತೆರಳಿ ಅಕ್ಕಿ ಸಂಗ್ರಹಿಸಿ ಜೀವಿಸಿರಿ ಎಂದು ಉಪದೇಶ ಮಾಡುವ ಈ ಗಡ್ಡಧಾರಿ ಮಂತ್ರಿಯ ವರ್ತನೆ ನಾಚಿಕೆಗೇಡಿತನದ್ದಾಗಿದೆ. ಮಾರ್ಚ್ 4 ರಂದು ಆಹಾಳ (ಗಂಗಾವತಿ) ಗ್ರಾಮದಲ್ಲಿ ಸೇರಿದ ರಾಯಚೂರ ಜಿಲ್ಲಾ ದಲಿತ ಸಂಘರ್ಷ ಸಮಿತಿಯು ಮಂತ್ರಿಯವರ ಈ ನಡತೆಯನ್ನು ಖಂಡಿಸಿದೆ.

ಚಿರಂತನ ಚೇತನ - ಎ. ಕೆ. ಜಿ.



ಭಾರತದ ಹೋರಾಟಗಳ ಇತಿಹಾಸದಲ್ಲಿ ಸದಾ ಸ್ಮರಣೀಯವಾದ ಹೆಸರು ಎ.ಕೆ. ಗೋಪಾಲನ್. ಇದೇ ಮಾರ್ಚ್ 22ಕ್ಕೆ ಈ ಮಹಾನ್ ಹೋರಾಟಗಾರ ಮರಣಿಸಿ ಏಳು ವರ್ಷ ಉರುಳುತ್ತದೆ.

1904 ರ ಅಕ್ಟೋಬರ್ 1 ರಂದು ಉತ್ತರ ಮಲಬಾರ್ ಜಿಲ್ಲೆಯ ಚಿರಕ್ಕಲ್ ತಾಲ್ಲೂಕಿನ ಗ್ರಾಮವೊಂದರಲ್ಲಿ ಜನ್ಮ ತಾಳಿದ ಕಾ. ಎ. ಕೆ. ಜಿ. ಅವರ ಪೂರ್ಣ ಹೆಸರು ಆಯಿಲ್ಯತ್ತ ಕುಟ್ಯಾರಿ ಗೋಪಾಲನ್ ನಂಬ್ಯಾರ್. ಮನೆಯ ವಾತಾವರಣ ಎ. ಕೆ. ಜಿ. ಅವರಿಗೆ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಮತ್ತು ಜನತೆಯೊಡನೆ ಬೆರೆಯುವ ಮೊದಲ ಅವಕಾಶವನ್ನು ಒದಗಿಸಿಕೊಟ್ಟಿತು. ಏಕೆಂದರೆ ಎ. ಕೆ. ಜಿ. ಅವರ ತಂದೆ ಅಂದಿನ ಸಮಾಜ ಸುಧಾರಕರಲ್ಲಿ ಒಬ್ಬರಾಗಿದ್ದರು. ತನ್ನ ವಿದ್ಯಾರ್ಥಿ ದೆಸೆಯಲ್ಲಿಯೇ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಲು ಮೊದಲು ಮಾಡಿದ ಎ.ಕೆ.ಜಿ. ನಂತರ ಏಳು ವರ್ಷಗಳ ಕಾಲ ಶಿಕ್ಷಕರಾಗಿ ಕೆಲಸ ಮಾಡಿ ಆದರ್ಶ ಶಿಕ್ಷಕರೆಂಬ ಪ್ರಶಂಸೆಗೆ ಪಾತ್ರರಾಗಿದ್ದರು. ತಮ್ಮ ಶಿಕ್ಷಕ ಜೀವನದಲ್ಲಿ ಅವರು ತಮ್ಮ ವಿದ್ಯಾರ್ಥಿಗಳಿಗೆ ಮೊಟ್ಟ ಮೊದಲು ಕಲಿಸಿದ್ದು ರಾಜಕೀಯ ಪ್ರಶ್ನೆ ಮತ್ತು ರಾಷ್ಟ್ರ ಪ್ರೇಮ ಎಂಬುದು ಇವತ್ತಿನ ಸಂಧರ್ಭದಲ್ಲಿ ಉಲ್ಲೇಖಿಸಲೇ ಬೇಕಾದಂತಹ ವಿಚಾರ.

ಎ. ಕೆ. ಜಿ. ಅವರು ತಮ್ಮ 20ನೆಯ ವಯಸ್ಸಿನಿಂದಲೇ ಸ್ವಾತಂತ್ರ್ಯ ಚಳವಳಿಯಲ್ಲಿ ಅಪಾರ ಆಕರ್ಷಣೆಯನ್ನು ಪಡೆದು ಕೊಂಡಿದ್ದರೂ ಅನೇಕ ಕಾರಣಗಳಿಂದಾಗಿ ಅದರಲ್ಲಿ ಅವರು ಧುಮುಕಲು ಸಾಧ್ಯವಾಗಲಿಲ್ಲ. 1929 ರಲ್ಲಿ ಕಾಂಗ್ರೆಸ್ಸು ತನ್ನ ಪ್ರಸಿದ್ಧವಾದ ಸ್ವಾತಂತ್ರ್ಯದ ಠರಾವನ್ನು ಅಂಗೀಕರಿಸಿದಾಗ ಚಳವಳಿಯಲ್ಲಿ ಒಂದು ಮಹತ್ವದ ತಿರುವು ಉಂಟಾಗಿ ಇಡೀ ದೇಶದ ಜನತೆ ಅತ್ಯಂತ ಉತ್ಸುಕತೆಯಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕಾಲ ಘಟ್ಟದಲ್ಲೇ ಎ. ಕೆ. ಜಿ. ಅವರ ಜೀವನದಲ್ಲೂ ಸಹ ಒಂದು ಪರಿವರ್ತನಾ ಹಂತ ಪ್ರಾರಂಭಗೊಂಡಿತು. ತಮ್ಮ ವೃತ್ತಿಗೆ ರಾಜೀನಾಮೆ ನೀಡಿ ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಲು ತೀರ್ಮಾನಿಸಿದರು. ಇದು ಅವರ ಕೆಲವು ಮಿತ್ರರಲ್ಲೂ, ಕುಟುಂಬ ವರ್ಗದಲ್ಲೂ ತೀವ್ರ ಅಸಮಾಧಾನವನ್ನುಂಟು ಮಾಡಿದ್ದರೂ ಕೂಡ ನಂತರ ಅವರು ಎಲ್ಲರಿಂದಲೂ ಅತ್ಯಂತ ಗೌರವಕ್ಕೆ ಪಾತ್ರರಾದ್ದು ತಮ್ಮ ನಿಸ್ವಾರ್ಥತೆ, ತ್ಯಾಗ, ಧೈರ್ಯಗಳಿಂದ ಮಾತ್ರ. 1934 ರಲ್ಲಿ ಕಾನೂನು ಭಂಗ ಚಳವಳಿಯನ್ನು ಅಮಾನತು ಗೊಳಿಸಿದಾಗ ಆ ತನಕ ರಾಷ್ಟ್ರೀಯ ಹೋರಾಟಗಳಲ್ಲಿ ಭಾಗವಹಿಸಿ ಸೆರೆ ವಾಸ ಅನುಭವಿಸಿದ್ದ ಯುವಕರಿಗೆ ರಾಷ್ಟ್ರೀಯ ಚಳವಳಿಯ ಧೋರಣೆ ಮತ್ತು ಕಾರ್ಯಕ್ರಮಗಳ ಮೇಲೆ ವಿಶ್ವಾಸ ಕಡಿಮೆಯಾಗಿ, ಹೊಸತೊಂದು ಧೋರಣೆಯು ಅಗತ್ಯವಿದೆಯೆಂಬ ಅಭಿಪ್ರಾಯ ಬೆಳೆದಾಗ ಕಾಂಗ್ರೆಸಿನೊಳಗೆ 'ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿ' ಎಂಬ ಗುಂಪು ರೂಪಿಸಲ್ಪಟ್ಟು ಕಾ. ಎ.ಕೆ.ಜಿ. ಅದರಲ್ಲಿ ಸಕ್ರಿಯವಾಗಿ ದುಡಿಯತೊಡಗಿದಾಗಲೇ ಕಾ. ಇ. ಎಂ. ಎಸ್. ನಂಬೂದಿರಿಪಾಡ್ ಅವರೊಂದಿಗೆ ಸಂಪರ್ಕವೂ ಬೆಳೆಯಿತು.

ಬ್ರಿಟಿಷರ ವಿರುದ್ಧ ನಡೆದ ಹೋರಾಟಗಳಲ್ಲಿ ಅನೇಕ ಕಷ್ಟ ಕಾರ್ಪಣ್ಯಗಳನ್ನೆದುರಿಸಿದ್ದ ಕಾ. ಎ. ಕೆ. ಜಿ. ಯವರು 1947 ರ ಆಗಸ್ಟ್ 15 ರಂದು ಕಣ್ಣಾನೂರಿನ ಬಂಧೀಖಾನೆಯಲ್ಲಿ ಬಂಧಿತರಾಗಿ ಉಳಿದದ್ದು. ನಂತರ ಬ್ರಿಟಿಷ್ ಚಕ್ರವರ್ತಿಗಿದಿರಾಗಿ ಜನತೆಯನ್ನು ಎತ್ತಿಕಟ್ಟಿದ್ದರೆಂಬ ಆರೋಪಕ್ಕೊಳಗಾಗಿ ಕಲ್ಲಿಕೋಟೆಯ ಅಡಿಶನಲ್ ಡಿಸ್ಟ್ರಿಕ್ ಮಾಜಿಸ್ಟ್ರೇಟರ ಮುಂದೆ ಬ್ರಿಟಿಷರಿಂದಲೇ ರೂಪಿಸಲ್ಪಟ್ಟಿದ್ದ ಕ್ರಿಮಿನಲ್ ಕಾನೂನಿನ 124 (ಎ) ವಿಧಿಗನುಸಾರವಾಗಿ ರಾಜ ದ್ರೋಹದ ಆರೋಪವನ್ನು ಹೊರಿಸಿ ವಿಚಾರಣೆ ನಡೆಸಿದ್ದು ಒಂದು ದೊಡ್ಡ ವಿಪರ್ಯಾಸ ಎನ್ನುವುದಕ್ಕಿಂತ ಬ್ರಿಟಿಷರ ನಂತರ ಅಧಿಕಾರ ವಹಿಸಿಕೊಂಡ ಭಾರತ ಸರಕಾರ ಎಂತಹ ಸ್ವರೂಪವನ್ನು ಹೊಂದಿತ್ತು ಎಂಬುದನ್ನು ಈ ಘಟನೆ ಬಯಲು ಗೊಳಿಸುತ್ತದೆ.

ಮೇಲ್ಕಂಡ ಘಟನೆಯ ಕುರಿತು ಸ್ವತಃ ಕಾ. ಎ. ಕೆ. ಜಿ. ಯವರೇ ನ್ಯಾಯಾಲಯದಲ್ಲಿ ನೀಡಿದ ಹೇಳಿಕೆ ಈ ರೀತಿಯಿತ್ತು : "ಬ್ರಿಟಿಷ್ ಇಂಡಿಯಾದ ಚಕ್ರವರ್ತಿಗೆ ಇದಿರಾಗಿ ದ್ವೇಷವನ್ನು ಬೆಳೆಸಿದ್ದೇನೆನ್ನಲು ನಾನು ಹೆಮ್ಮೆ ಪಡುತ್ತೇನೆ. ಈ ದೇಶದ ಎಲ್ಲಾ ಸ್ವಾತಂತ್ರ್ಯಪ್ರೇಮಿಗಳೂ, ಸ್ವಾತಂತ್ರ್ಯ ಹೋರಾಟವು ಆರಂಭವಾದಂದಿನಿಂದಲೂ ಅದರ ಮುಖಂಡರಾಗಿರುವ ನೆಹರು, ಗಾಂಧಿ, ಮೊದಲಾದವರು, ಚಕ್ರವರ್ತಿಯ ಸರಕಾರಕ್ಕಿದಿರಾಗಿ ವೈಷಮ್ಯವನ್ನು ಬೆಳೆಸಲು ಶ್ರಮವಹಿಸಿದ್ದಾರೆ. ಇದೇ ಕಾರಣಕ್ಕಾಗಿ, ಹಿಂದೆ ಮಹಾತ್ಮ ಗಾಂಧಿಯ ವಿರುದ್ಧವೂ ಭಾರತೀಯ ದಂಡ ಸಂಹಿತೆಯ 124 (ಎ) ನಿಬಂಧನೆಯ ಪ್ರಕಾರ ವಿಚಾರಣೆ ನಡೆದಿದೆ. ಇವೆಲ್ಲದರ ಫಲವಾಗಿ ಚಕ್ರವರ್ತಿಯ ಸರಕಾರವೂ ಬ್ರಿಟಿಶ್ ಇಂಡಿಯಾವೂ ಇಂದು ಕೊನೆಗೊಂಡಿದೆ. ನನ್ನೊಂದಿಗೆ ಇದೇ ಅಪರಾಧಗಳಲ್ಲಿ ಭಾಗಿಗಳಾಗಿದ್ದ ಒಡನಾಡಿಗಳಲ್ಲಿ ಹಲವರು ಇಂದು ಮಂತ್ರಿಗಳೂ, ರಾಜ್ಯಪಾಲರೂ ಆಗಿರುತ್ತಾರೆ. ಆಗಸ್ಟ್ 15 ರಂದು ಸ್ವಾತಂತ್ರ್ಯ ಗಳಿಸಿದ್ದೇವೆಂದು ಪರಿಗಣಿತವಾಗಿರುವ ಈ ಸಂಧರ್ಭದಲ್ಲಿ ನನ್ನನ್ನು ಇಲ್ಲಿಗೆ ವಿಚಾರಣೆಗೆ ತಂದಿರುವುದು ವಿಚಿತ್ರ. ನನಗಿದರಿಂದ ಖೇದವಾಗಿದೆ." ನಿಜವಾಗಿಯೂ ಇದೊಂದು ಅತ್ಯಂತ ಮಾರ್ಮಿಕವಾದ, ವೇದನಾ ಪೂರ್ಣವಾದ ಹೇಳಿಕೆ. ಇದಾದ ಒಂದು ತಿಂಗಳ ನಂತರ ಕೇರಳದಲ್ಲಿ ಎ.ಕೆ.ಜಿ. ಅವರ ಬಂಧನದಕುರಿತು ತೀವ್ರ ಪ್ರತಿಭಟನೆ ಸ್ಫೋಟಗೊಂಡಿತು. ಅವರ ಬಿಡುಗಡೆಗೆ ಒತ್ತಾಯಿಸಿ ವ್ಯಾಪಕವಾದ ಚಳವಳಿ ಆರಂಭವಾಯಿತು. ಜೈಲಿನ ಒಳಗೆ ಕಾ. ಎ.ಕೆ.ಜಿ. ಉಪವಾಸ ಮುಷ್ಕರವನ್ನು ನಡೆಸಿದರು. ಅಂತೂ ಇವೆಲ್ಲದರ ಫಲವಾಗಿ ಅಕ್ಟೋಬರ್ 12 ರಂದು ಅವರ ಬಿಡುಗಡೆ ಆಯಿತು.

ಸ್ವತಂತ್ರ ಭಾರತದಲ್ಲಿ ಅವರು ನಡೆಸಿದ ಹೋರಾಟಗಳು, ಉಪವಾಸಗಳು, ಭೂಗತ ಜೀವನ ಹೆಚ್ಚು ತೀವ್ರಗೊಂಡಿದ್ದವು. ಜೀವನದ ಬಹುಭಾಗವನ್ನು ಸೆರೆ ಮನೆಯಲ್ಲೇ ಕಳೆದ ಈ ಧೀರ ಹೋರಾಟಗಾರ 1952 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಣ್ಣಾನೂರು ಪಾರ್ಲಿಮೆಂಟ್ ಕ್ಷೇತ್ರದಿಂದ ಗೆದ್ದು ಬಂದು ತನ್ನ ಜೀವಿತದ ಕೊನೆಯವರೆಗೂ ಆ ಸ್ಥಾನವನ್ನು ಉಳಿಸಿಕೊಂಡು, ಆಡಳಿತ ಪಕ್ಷವನ್ನು ಪಾರ್ಲಿಮೆಂಟಿನಲ್ಲಿ ನಡುಗಿಸಿದ್ದು ಜನತೆಯ ನಾಯಕನಾಗಿ, ಅಪ್ರತಿಮ ಹೋರಾಟಗಾರನಾಗಿ. 1964 ರಲ್ಲಿ ಕಮ್ಯೂನಿಸ್ಟ್ ಪಕ್ಷ ವಿಭಜನೆಗೊಂಡಾಗ ಕಾ. ಎ.ಕೆ.ಜಿ. ಸಿ.ಪಿ.ಐ. (ಎಂ)ನಲ್ಲಿ ಉಳಿದು ಅದನ್ನು ಬಲಿಷ್ಠಗೊಳಿಸಲು ತಮ್ಮೆಲ್ಲಾ ಪ್ರತಿಭೆಗಳನ್ನೂ, ತ್ಯಾಗವನ್ನೂ ಸಮರ್ಪಿಸಿದರು.

ರೈತ-ಕಾರ್ಮಿಕರಿಗಾಗಿ, ತುಳಿತಕ್ಕೊಳಗಾದ ಕೋಟ್ಯಾಂತರ ಶೋಷಿತರಿಗಾಗಿ, ಹಗಲಿರುಳು ದುಡಿದು ಅಗಲಿದ ಕಾ. ಎ. ಕೆ. ಜಿ. ಭಾರತದ ಹೋರಾಟಗಳ ಇತಿಹಾಸದಲ್ಲಿ, ಕಮ್ಯೂನಿಸ್ಟ್ ಚಳವಳಿಯ ಚರಿತ್ರೆಯಲ್ಲಿ ಚಿರಂತನವಾದ ಹೆಸರು. ಸಮಾನತೆಯ ಹೊಸ ಬದುಕಿಗಾಗಿ ತುಡಿವವರಿಗೆ ಜೀವ ತುಂಬುವ ಉಸಿರು.

—"ಉದಯ"

ಕಾ. ಕುರುಣೆ ಅವರಿಗೆ ಕೆಂಪು ವಂದನೆಗಳು

ಮಹಾರಾಷ್ಟ್ರದ ಸಿ. ಪಿ. ಐ (ಎಂ) ಮುಖಂಡರೂ, ಸಿ. ಐ. ಟಿ. ಯು ಪ್ರಧಾನ ಕಾರ್ಯದರ್ಶಿಯವರೂ, ಆದ ಪ್ರಭಾಕರ ಕುರುಣೆಯವರು ಅಕಾಲಿಕ ನಿಧನಕ್ಕೆ ತುತ್ತಾಗಿದ್ದಾರೆ.

ಇವರು ಕೊಲ್ಲಾಪುರದಲ್ಲಿ ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ, ಕಾಲೇಜು ಶಿಕ್ಷಣವನ್ನು ಮುಗಿಸಿ, ಹೆಚ್ಚಿನ ಅಭ್ಯಾಸಕ್ಕಾಗಿ 1938 ರಲ್ಲಿ ಮುಂಬಯಿಗೆ ಬಂದು ವಿದ್ಯಾರ್ಥಿ ಚಳುವಳಿಗೆ ಸೇರಿಕೊಂಡರು. ಕಾನೂನು ವಿರುದ್ಧವಾಗಿದ್ದ ಭಾರತ ಕಮ್ಯೂನಿಸ್ಟ್ ಪಾರ್ಟಿಗೆ ಅದೇ ವರ್ಷ ಸದಸ್ಯರಾದರು. ಮುಂಬಯಿ ಗಿರಣಿ ಕಾಮಗಾರ ಯೂನಿಯನಿನ ಪ್ರತಿಯೊಂದು ಮುಷ್ಕರ, ಮತ ಪ್ರದರ್ಶನ, ಸಾರ್ವಜನಿಕ ಸಭೆಗಳಲ್ಲಿ ಇವರು ಪಾಲ್ಗೊಂಡಿದ್ದಲ್ಲದೆ ಪೋಲೀಸರ ಅತ್ಯಾಚಾರಕ್ಕೂ ತುತ್ತಾಗಿದ್ದರು. ಪಾರ್ಟಿಯ ಆದೇಶದ ಪ್ರಕಾರ ಅವರು ಕಾಂಗ್ರೆಸ್ಸನ್ನು ಸೇರಿ ಮುಂಬಯಿ ಪ್ರದೇಶ ಕಾಂಗ್ರೆಸ್ ಕಮಿಟಿಗೆ ಆರಿಸಿ ಬಂದು 'ಜಿ' ವಾರ್ಡ ಕಮಿಟಿಯ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟಿದ್ದರು. ಸುಭಾಸ್ ಚಂದ್ರ ಭೋಸರ ಮರಣದ ನಂತರ ಎಡ ಶಕ್ತಿಗಳ ದೃಢೀಕರಣ ಕಮಿಟಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

1940 ರ ಗಿರಣಿ ಕೆಲಸಗಾರರ ಮುಷ್ಕರದಲ್ಲಿ ನಿರಂತರ ದುಡಿದು 6 ತಿಂಗಳು ಜೈಲುವಾಸ ಅನುಭವಿಸಿ, ಅನಂತರ 1942 ಜುಲೈ ತನಕ ಸ್ಥಾನ ಬದ್ಧತೆಯಲ್ಲಿದ್ದರು. ಅವರು ಸ್ಥಾನ ಬದ್ಧತೆಯಲ್ಲಿದ್ದಾಗ, ಪಾರ್ಟಿ ಚಟುವಟಿಕೆಗಳ ಸುದ್ದಿ ತಿಳಿದುಕೊಳ್ಳುವ ದುರುದ್ದೇಶದಿಂದ ಬ್ರಿಟಿಷ್ ಪೋಲೀಸರು ಇವರ ಮೇಲೆ ಅಮಾನುಷ ಅತ್ಯಾಚಾರ ನಡೆಸಿದರು. ಹಲವಾರು ಗಂಟೆ ಅವರನ್ನು ಐಸ್‌ನಲ್ಲಿ ಮಲಗಿಸಲಾಯಿತು. ಸರಕಾರಿ ನೌಕರಿಯಲ್ಲಿದ್ದ ಅವರ ತಂದೆಯ ಮೇಲೆ ಒತ್ತಾಯ ತರಲಾಯಿತು. ಕೊನೆಗೆ ಅವರು ಪೋಲೀಸರ ಏಜೆಂಟರೆಂಬ ಸುದ್ದಿಯನ್ನು ಹಬ್ಬಿಸಲಾಯಿತು. ಇವುಗಳನ್ನೆಲ್ಲ ಅವರು ಧೈರ್ಯದಿಂದೆದುರಿಸಿದರು.

ಕಮ್ಯೂನಿಸ್ಟ್ ಪಾರ್ಟಿಯ ಪ್ರಥಮ ಸಮ್ಮೇಳನಕ್ಕೆ ಅವರು ಪ್ರತಿನಿಧಿಯಾಗಿದ್ದರು. ವಿಜಯವಾಡದಲ್ಲಿ ಸೇರಿದ್ದ 11ನೇ ಸಮ್ಮೇಳನ ಅವರಿಗೆ ಕೊನೆಯದಾಯಿತು.

ಸ್ವತಂತ್ರ ಭಾರತದ ಕಾಂಗ್ರೆಸ್ ಆಡಳಿತ 1948 ರಲ್ಲಿ ಅವರನ್ನು ಬಂಧಿಸಿತು. 1949 ರಲ್ಲಿ ಠಾಣೆ ಜೈಲಿನಲ್ಲಿ ಕೆಂಪು ಧ್ವಜ ಹಾರಿಸಿದಾಗ ಅವರನ್ನು ಅಮಾನುಷವಾಗಿ ಹೊಡೆಯಲಾಯಿತು. 52 ಸಲ ಲಾಠಿ ಪೆಟ್ಟು ಬಿದ್ದ ನಂತರ ಅವರು ಸ್ಮೃತಿ ತಪ್ಪಿ ಬಿದ್ದಾಗ ಮಾತ್ರ ಅವರು ತಮ್ಮ ಎದೆಗೆ ಅವಚಿಕೊಂಡಿದ್ದ ಕೆಂಪು ಧ್ವಜವನ್ನು ಕಸಿದುಕೊಳ್ಳುವುದರಲ್ಲಿ ಪೋಲೀಸರು ಯಶಸ್ವಿಯಾದರು.

1956 ರಲ್ಲಿ ಮಹಾರಾಷ್ಟ್ರ ಏಕೀಕರಣ ಚಳುವಳಿಯಲ್ಲಿಯೂ ಅವರು ಬಂಧನಕ್ಕೊಳಗಾದರು. 12 ವರ್ಷ ಇವರು ಜೈಲುವಾಸ ಅನುಭವಿಸಿದ್ದರು.

ಎರಡು ಸಲ ಮುಂಬಯಿ ಮಹಾನಗರ ಪಾಲಿಕೆಗೂ, ಒಂದು ಸಲ ವಿಧಾನ ಸಭೆಗೂ ಆರಿಸಿಬಂದಿದ್ದರು.

ಕಾರ್ಮಿಕ ಸಂಘಗಳ ಜಂಟಿಕ್ರಿಯಾ ಸಮಿತಿ ರಚಿಸಿ ಬೆಳೆಯಿಸಿರಿಕೆ, ಟ್ರೇಡ್ ಯೂನಿಯನ್ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಸಂಯುಕ್ತ ಚಳುವಳಿ ನಡೆಸುವುದರಲ್ಲಿ ಅವರ ಪಾತ್ರ ಪ್ರಧಾನವಾಗಿತು.

ತನ್ನ ಶರೀರದ ಮೇಲೆ ಸತತವಾಗಿ ಪೋಲೀಸರ ದಬ್ಬಾಳಿಕೆ ನಡೆದರೂ ಕೂಡ ಉಕ್ಕಿನಂತ ಅವರ ಶರೀರ ಮತ್ತು ಮನೋಧೈರ್ಯ ಅವರು ತಮ್ಮ ಕರ್ತವ್ಯ ನಿಗಿಸಿಕೊಂಡು ಹೋಗುವಂತೆ ಮಾಡಿತ್ತು.

ಕಳೆದ ಹಲವು ವರ್ಷಗಳಿಂದ ಅವರ ಪುಪ್ಪುಸಗಳು ಶೇ 70 ರಷ್ಟು ಹಾಳಾಗಿದ್ದರೂ ಕೂಡ, ಪಾರ್ಟಿಯ ಧ್ಯೇಯವನ್ನು ಎತ್ತಿ ಹಿಡಿಯುವಲ್ಲಿ, ನಿಷ್ಠೆಯಿಂದ, ಶಿಸ್ತು ಬದ್ಧವಾಗಿ ಕೆಲಸ ಮಾಡುವುದರಲ್ಲಿ ಕುರಣೆಯವರು ಹಿಂದೆ ಬಿದ್ದಿಲ್ಲ. ಅಲ್ಪ ಪುಪ್ಪುಸದಿಂದ ಜೀವಂತವಿರುವುದು ಅಸಾಧ್ಯವೆಂದು ಗೊತ್ತಿದ್ದರೂ ಕೂಡ, ಕೊನೆಯುಸಿರು ಸ್ಥಂಬನವಾಗುವವರೆಗೂ ಅವರು ದುಡಿಯುತ್ತ ಬಂದರು. ವಿಶ್ರಾಂತಿ ಪಡೆಯುತ್ತಿದ್ದರೆ ಇನ್ನೂ ಕೆಲವು ವರ್ಷ ಅವರು ಬದುಕುಳಿಯ ಬಹುದಾಗಿತ್ತು. ಕೆಲಸವಿಲ್ಲದ ಜೀವನ ನಿರರ್ಥಕವೆಂದು ತಿಳಿದೇ ಅವರು ನಿಶ್ಚಿಂತೆಯಾಗಿ ಆಸುನೀಗಿದರು.

"ದುಡಿಯುವ ಜನತೆಯ ಹೋರಾಟಗಳಿಗೆ ಮೀಸಲಾಗಿತ್ತು ಕುರುಣೆಯವರ ಜೀವನ. ಅತಿ ಉತ್ತಮ ಔಷಧೋಪಚಾರಗಳಿಂದಲೂ ಕೂಡ ತಾನು ಹೋರಾಟ ನಡೆಸಲು ಹೆಚ್ಚು ದಿವಸ ಜೀವಂತ ಇರಲು ಸಾಧ್ಯವಿಲ್ಲೆಂದು ಮನದಟ್ಟಾದಾಗ, ಕೆಲಸ ಮಾಡಲು ಅಶಕ್ಯವಾದ ರೀತಿಯಲ್ಲಿ ಬದುಕಿ ಉಳಿಯುವುದಕ್ಕಿಂತ, ಸಾಯುವುದೇ ಉತ್ತಮವೆಂದು ತಿಳಿದೇ ಅವರು ಮರಣವನ್ನಪ್ಪಿದರು. "ಮರಣದಲ್ಲಿ ಕೂಡ ಸಾಯದಂತ ವ್ಯಕ್ತಿಗಳು ನಾವು" ಎಂದು ಕುರುಣೆಯವರನ್ನು ರಾಜಕೀಯಕ್ಕೆ ತಂದ ಕಾ. ಬಿ. ಟಿ. ರಣದಿವೆಯವರು ಸ್ಮಶಾನದಲ್ಲಿ ಭಾಷಣ ಮಾಡುತ್ತ ಅಗಲಿ ಹೋದ ಒಬ್ಬ ಅತ್ಯುತ್ತಮ ಕ್ರಾಂತಿಕಾರಿಗೆ ತಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸಿದ್ದಾರೆ.

[6ನೇ ಪುಟ ನೋಡಿ]

ಕಾರ್ಲ್ ಮಾರ್ಕ್ಸ್ ಮರಣ ಶತಾಬ್ಧಿಯ ಮುಕ್ತಾಯ

ಕಾರ್ಲ್ ಮಾರ್ಕ್ಸ್‌ರ ಬೋಧೆಗಳು ಅಮರ

"ಯುರೋಪನ್ನು ಒಂದು ಭೂತ ಕಾಡುತ್ತಿದೆ–ಕಮ್ಯೂನಿಸಂನ ಭೂತವದು. ಈ ಭೂತದ ಉಚ್ಚಾಟನೆಗೆ ಯುರೋಪಿನ ಎಲ್ಲಾ ಶಕ್ತಿಗಳು–ಪೋಪ್, ಜಾರ್, ಮೆಟರ್‌ನಿಕ್ ಮತ್ತು ಗಿಝೋ, ಫ್ರೆಂಚ್ ತೀವ್ರವಾದಿಗಳು ಮತ್ತು ಜರ್ಮನ್ ಪೋಲೀಸ್ ಗುಪ್ತಚಾರರು ಒಂದು ಪವಿತ್ರ ಕೂಟ ಏರ್ಪಡಿಸಿಕೊಂಡಿದ್ದಾರೆ"– ಹೀಗೆಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ತಮ್ಮ ಅಮರಕೃತಿ "ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ" ದಲ್ಲಿ ಬರೆದಿದ್ದರು.

ಈಗ, 135 ವರ್ಷಗಳ ನಂತರ ಅತ್ಯಂತ ಉಚಿತವೂ, ಸುಯೋಗ್ಯವೂ ಆದ ದೃಶ್ಯವನ್ನು ಕಾಣುತ್ತಿದ್ದೇವೆ. ಅದೇನೆಂದರೆ, ಕಮ್ಯೂನಿಸಂನ ಮಹಾನ್ ಧ್ಯೇಯ ಉಚ್ಚಾಟನೆಗೊಳ್ಳಲಿಲ್ಲ. ಬದಲಾಗಿ, ಸಮಸ್ತ ಭೂಮಂಡಲದಲ್ಲಿ ಅದು ವಿಜಯೋತ್ಸಾಹದಿಂದ ಮುನ್ನಡೆಯುತ್ತಿದೆ; ಬಂಡವಾಳ ಶಾಹಿ ಮತ್ತು ಸಾಮ್ರಾಜ್ಯಶಾಹಿಯ ಅಂತ್ಯ ಖಂಡಿತವಾಗಿಯೂ ಸಮೀಪಿಸುತ್ತಿದೆ ಮತ್ತು ಶತಮಾನಗಳ ಕಾಲದ ಶೋಷಣೆ ಮತ್ತು ಅಗಣಿತ ಮಾನವ ಸಂಕಷ್ಟಗಳ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಪ್ರತಿಯೊಬ್ಬ ಶೋಷಕನನ್ನೂ ಬೆದರಿಸುತ್ತಾ ಮುನ್ನಡೆಯುತ್ತಿದೆ.

ಕಳೆದ ವರ್ಷ ಮಾರ್ಕ್ಸ್ ಮರಣ ಶತಾಬ್ಧಿ ಆಚರಿಸುತ್ತಿದ್ದಾಗ ಮಾರ್ಕ್ಸ್‌ವಾದದ ಪಕ್ಕಾ ವಿರೋಧಿಗಳಾದ ಪಂಡಿತರು "ಖ್ಯಾತಿವೆತ್ತ" ಜನಗಳೂ ಅವುಗಳಲ್ಲಿ ಭಾಗವಹಿಸಬೇಕಾಗಿ ಬಂತು. ಇಲ್ಲವಾದರೆ ತಮ್ಮನ್ನು ಮೂಢರೆಂದು, ಬೌದ್ಧಿಕ ಪಿಗ್ಮಿಗಳೆಂದು ಕಡೆಗಣಿಸಬಹುದೆಂಬ ಭೀತಿ ಅವರಿಗೆ.

ಬೂರ್ಜ್ವಾ ಪಾರ್ಲಿಮೆಂಟುಗಳು ಮಾರ್ಕ್ಸ್‌ರಿಗೆ ವಿಪರೀತವೆನಿಸುವಷ್ಟು ನಮನ ಸಲ್ಲಿಸಿದವು. ಬೂರ್ಜ್ವಾಗಳ ನಿಯಂತ್ರಣದಲ್ಲಿರುವ ಪತ್ರಿಕೆಗಳು ಮಾರ್ಕ್ಸ್‌ರ ಮೇಧಾವಿತನ ಹಾಗೂ ಆತನ ಮಹಾನ್ ಸಿದ್ಧಾಂತದ ಮೇಲೆ ಪ್ರಶಂಸೆಗಳ ಮಳೆಗರೆಯುವ ಲೇಖನಗಳನ್ನು, ಸಂಪಾದಕೀಯಗಳನ್ನು ಪ್ರಕಟಿಸಿ ಧನ್ಯವಾದವು. ಬೂರ್ಜ್ವಾಗಳ ಪ್ರಾಬಲ್ಯದಲ್ಲಿರುವ ವಿಶ್ವವಿದ್ಯಾಲಯಗಳು, ಅಧ್ಯಯನ ಕೇಂದ್ರಗಳು ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಮಾರ್ಕ್ಸ್‌ರನ್ನು ಮತ್ತು ಅವರ ಮಹಾನ್ ಬೋಧೆಗಳನ್ನು ಗೌರವಿಸಿ ಹೆಮ್ಮೆ ಪಟ್ಟುಕೊಂಡವು.

"ಮಾರ್ಕ್ಸ್‌ವಾದದ ಸೈದ್ಧಾಂತಿಕ ವಿಜಯ ಅದರ ಶತ್ರುಗಳೇ ಸ್ವತಃ ಮಾರ್ಕ್ಸ್‌ವಾದಿಗಳ ವೇಷ ತೊಡುವಂತೆ ಮಾಡಿದೆ" ಎಂದು ಲೆನಿನ್ ಎಷ್ಟು ಚೆನ್ನಾಗಿ ಹೇಳಿದ್ದಾರೆ! ಈಗ ಮಾರ್ಕ್ಸ್ ಮತ್ತು ಎಂಗೆಲ್ಸರ ಬರವಣಿಗೆಗಳ ಸೂಕ್ತಿಗಳನ್ನು ಬಲ್ಲ, ಎಲ್ಲೆಂದರಲ್ಲಿ ಅವರ ಹೇಳಿಕೆಗಳನ್ನು ಉದ್ಧರಿಸುವಲ್ಲಿ ಹೆಮ್ಮೆ ಪಟ್ಟುಕೊಳ್ಳುವ, ತಾವು ಸರ್ವೋತ್ಕೃಷ್ಟ ಮಾರ್ಕ್ಸ್‌ವಾದಿ ಬುದ್ಧಿಜೀವಿಗಳೆಂದು ಪ್ರದರ್ಶಿಸಿ ಕೊಳ್ಳುತ್ತಾ ತಿರುಗುವ ಎಷ್ಟೋ ಜನಗಳನ್ನು ಕಾಣಬಹುದು. ಮಿಗುತಾಯ ಮೌಲ್ಯ, ಗೇಣಿ, ಮಾನವೇತಿಹಾಸದ ಬೆಳವಣಿಗೆಯ ನಿಯಮಗಳ ಬಗ್ಗೆ ಮಾರ್ಕ್ಸ್‌ರ ಸಿದ್ಧಾಂತಗಳು ಹಾಗೂ ಕೂಲಿ, ಬೆಲೆ, ಮೌಲ್ಯ ಮತ್ತು ಲಾಭಗಳ ಬಗ್ಗೆ ಆತನ ಪ್ರತಿಪಾದನೆಗಳನ್ನು ಚರ್ಚಿಸುವಲ್ಲಿ, ಅವುಗಳ ಬಗ್ಗೆ ಪ್ರವಚನ ನೀಡುವಲ್ಲಿ ಪರಿಣತರಾಗಿರುವುದರಿಂದ ಸಮಾಜವಾದ ಮತ್ತು ಕಮ್ಯೂನಿಸಂನ ಧ್ಯೇಯಗಳಿಗಾಗಿ ಹೋರಾಟ ನಡೆಸಲು ತಮ್ಮ ಜೀವನವನ್ನು ಅರ್ಪಿಸಿಕೊಂಡಿರುವ "ಸಾಮಾನ್ಯ" ಜನರ ಬಗ್ಗೆ ಸದಾಕಾಲ ತಿರಸ್ಕಾರ ಸೂಸುವ ಜನಗಳವರು.

ಸತ್ಯತೆ ಸಿದ್ಧಗೊಂಡಿದೆ.

ಮಾನವ ಕುಲದ ಮೂರರಲ್ಲಿ ಒಂದು ಭಾಗ ಆಗಲೇ ಬಂಡವಾಳ ಶಾಹಿಯನ್ನು ಎಸೆದು ಸಮಾಜವಾದಿ ಮತ್ತು ಕಮ್ಯೂನಿಸ್ಟ್ ಸಮಾಜ ಕಟ್ಟುವುದರಲ್ಲಿ ನಿರತರಾಗಿದ್ದಾರೆ, ಸಾರ್ವತ್ರಿಕ ಬಿಕ್ಕಟ್ಟಿನಿಂದ ಆವೃತವಾಗಿರುವ ಜಾಗತಿಕ ಬಂಡವಾಳ ಶಾಹಿ ಅಗಣಿತ ನೋವು ಸಂಕಷ್ಟ, ವಿನಾಶ ಹಾಗೂ ಸಾವಿಗೆ ಕಾರಣವಾಗುತ್ತಿದೆ, ಸಮಾಜವಾದ, ಪ್ರಜಾಪ್ರಭುತ್ವ, ಶಾಂತಿ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯದ ಜಾಗತಿಕ ಶಕ್ತಿಗಳು ಮರಣಾಸನ್ನ ಬಂಡವಾಳ ಶಾಹಿಯ ಕರಾಳ ಶಕ್ತಿಗಳ ವಿರುದ್ಧ ಮೇಲುಗೈ ಪಡೆಯುತ್ತಿವೆ ಎಂಬ ಸರಳ ಸಂಗತಿಯೇ ಮಾರ್ಕ್ಸ್‌ರ ಬೋಧೆಗಳು ಎಷ್ಟೊಂದು ಸುಸಮಂಜಸವೆಂಬುದನ್ನು ಸಾರಿ ಹೇಳುತ್ತಿದೆ.

ಈ ಶತಮಾನದ ಆರಂಭದಲ್ಲೇ ಬಂಡವಾಳ ಶಾಹಿಯ ಜಾಗತಿಕ ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟು ಸ್ಫೋಟಗೊಂಡು ಪ್ರಥಮ ಮಹಾಯುದ್ಧ ತಲೆದೋರುವಂತಾಯಿತು. ಒಂದರ ಹಿಂದೊಂದರಂತೆ ಸಾಲಾಗಿ ನಡೆದ ಕಾರ್ಮಿಕ ವರ್ಗದ ಹಾಗೂ ರಾಷ್ಟ್ರೀಯ ವಿಮೋಚನಾ ಕ್ರಾಂತಿಗಳು ಈ ಯುದ್ಧದ ಜ್ವಾಲೆಯನ್ನು ಆರಿಸಿ, ಮಾನವ ಕುಲವನ್ನು ಬಂಡವಾಳಶಾಹಿ ಹಿಂಸೆ ಮತ್ತು ಯುದ್ಧದ ಪೀಡೆಯಿಂದ ರಕ್ಷಿಸಬೇಕಾಗಿ ಬಂತು.

ಬಂಡವಾಳ ಶಾಹಿಯಲ್ಲಿ ಅಂತರ್ಗತವಾಗಿರುವ ವೈರುಧ್ಯಗಳು ಪರಿಹರಿಸಲಾಗದ ಬಿಕ್ಕಟ್ಟೊಂದಕ್ಕೆ ಎಡೆ ಮಾಡಿಕೊಡುವುದು ಶತಸ್ಸಿದ್ಧ; ತನ್ಮೂಲಕ ಬಂಡವಾಳವಾಳ ಶಾಹಿ ಸಮಾಜ ವ್ಯವಸ್ಥೆಯ ಜಾಗದಲ್ಲಿ ಸಮಾಜವಾದಿ ಮತ್ತು ಕಮ್ಯೂನಿಸ್ಟ್ ಸಮಾಜ ವ್ಯವಸ್ಥೆ ಸ್ಥಾಪಿಸುವುದು ಅಗತ್ಯವಾಗುತ್ತದೆ ಎಂಬ ಮೂಲಭೂತ ಮಾರ್ಕ್ಸ್‌ವಾದಿ ಸಿದ್ಧಾಂತ ಎಷ್ಟು ಸತ್ಯವಾದುದು ಎಂಬುದನ್ನು ಕಳೆದ ಎಪ್ಪತ್ತು ವರ್ಷಗಳ ಇತಿಹಾಸ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ.

ಬಂಡವಾಳಶಾಹಿಯ ಬಿಕ್ಕಟ್ಟು

ಕಳೆದ ಎಪ್ಪತ್ತು ವರ್ಷಗಳಲ್ಲಿ ನಡೆದ ಎರಡು ಭಯಾನಕ ಜಾಗತಿಕ ಯುದ್ಧಗಳು, ಬೃಹತ್ ಪ್ರಮಾಣದಲ್ಲಿ ವಿಧ್ವಂಸ ಮತ್ತು ವಿನಾಶ ನಡೆಸಿದ ಹಲವು ಸ್ಥಳೀಯ ಯುದ್ಧಗಳು ಏನನ್ನು ತಾನೇ ಪ್ರದರ್ಶಿಸುತ್ತವೆ? ಬಂಡವಾಳ ಶಾಹಿ ನಿಸ್ಸಂಶಯವಾಗಿಯೂ ಒಂದು ಬಿಕ್ಕಟ್ಟಿನ ಜವುಗಿನಲ್ಲಿ ಸಿಲುಕಿಕೊಂಡಿದೆ ಎಂದೇ ಅಲ್ಲವೇ ಇದನ್ನೇ ಮಾರ್ಕ್ಸ್‌ವಾದಿಗಳು ಬಂಡವಾಳ ಶಾಹಿಯ ಸಾರ್ವತ್ರಿಕ ಬಿಕ್ಕಟ್ಟು ಎಂದು ನಿರೂಪಿಸಿರುವುದು. ಮೊದಲ ಜಾಗತಿಕ ಯುದ್ಧದಲ್ಲಿ ಮಾನವ ಕುಲದ ಒಂದು ಕೋಟಿ ಜನ ಪ್ರಾಣ ಕಳಕೊಂಡರು, ಎರಡು ಕೋಟಿ ಜನ ಅಂಗವಿಕಲರಾದರು ಎಂಬುದು ಯಾರಿಗೆ ತಾನೇ ತಿಳಿದಿಲ್ಲ? ಹಿರೋಶಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಪಶುಸಮಾನ ರೀತಿಯಲ್ಲಿ ಹಾಕಿದ ಅಣು ಬಾಂಬುಗಳಲ್ಲದೆ, ಆರು ವರ್ಷಗಳ ದೀರ್ಘಕಾಲ ಮುಂದುವರಿದು 5.5 ಕೋಟಿ ಜೀವಗಳನ್ನು ಬಲಿ ತೆಗೆದುಕೊಂಡ ಎರಡನೇ ಜಾಗತಿಕ ಯುದ್ಧದ ಅನರ್ಥಗಳನ್ನು ಯಾರು ತಾನೇ ಮರೆಯಲು ಸಾಧ್ಯ?

ಎಂ. ಬಸವಪುನ್ನಯ್ಯ

ಎರಡನೇ ಮಹಾಯುದ್ಧದ ನಂತರ ಸುಮಾರು 150 ಸಶಸ್ತ್ರ ಘರ್ಷಣೆಗಳಲ್ಲಿ 2·5 ಕೋಟಿ ಜನ ಬಲಿಯಾಗಿದ್ದಾರೆ ಎಂದು ತಿಳಿದು ಬಂದಿದೆ.

1983 ಮಾರ್ಚ್ 19 ರಂದು ಅಸೋಸಿಯೇಟೆಡ್ ಪ್ರೆಸ್ ವಾಶಿಂಗ್ಟನ್ನಿನಿಂದ ನೀಡಿದ ಸುದ್ದಿಯ ಪ್ರಕಾರ "ನಲ್ವತ್ತೈದು ದೇಶಗಳು ಅಂದರೆ ಜಗತ್ತಿನ ದೇಶಗಳಲ್ಲಿ ನಾಲ್ಕನೇ ಒಂದು ಭಾಗಕ್ಕಿಂತಲೂ ಹೆಚ್ಚು ದೇಶಗಳು ಈಗ ಯುದ್ಧಗಳಲ್ಲಿ ನಿರತವಾಗಿವೆ" ಹಾಗೂ "10 ರಿಂದ 50 ಲಕ್ಷ ಜನರನ್ನು ಕೊಂದಿರುವ ಈ ಯುದ್ಧಗಳಲ್ಲಿ 40 ಲಕ್ಷಕ್ಕೂ ಹೆಚ್ಚು ಸೈನಿಕರು ನಿರತರಾಗಿದ್ದಾರೆ." ಅಮೇರಿಕಾದ ನಿವೃತ್ತ ಸೇನಾಧಿಕಾರಿಗಳ ಮುಖಂಡತ್ವದಲ್ಲಿರುವ ರಕ್ಷಣಾ ಸುದ್ದಿ ಕೇಂದ್ರ ಒದಗಿಸಿದ ಸಂಗತಿ ಈ ವರದಿಗೆ ಆಧಾರ.

ಈ ಮಾನವ ಸಂಹಾರಿ ಕೈಗಾರಿಕೆಯಲ್ಲಿ ಜಗತ್ತಿನ ಸಂಪತ್ತಿನಲ್ಲಿ ಶತಕೋಟಿ, ಸಹಸ್ರಕೋಟಿ ಅಮೇರಿಕನ್ ಡಾಲರುಗಳನ್ನು ಭಸ್ಮ ಮಾಡಲಾಗುತ್ತಿದೆ. ಅಮೇರಿಕಾ ಹಾಗೂ ಯುರೋಪಿನ ಇತರ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಕೋಟಿಗಟ್ಟಲೆ ಕಾರ್ಮಿಕರನ್ನು ಕೆಲಸದಿಂದ ಹೊರಗೆಸೆಯಲಾಗುತ್ತಿದೆ. ತೃತೀಯ ಜಗತ್ತಿನ ದೇಶಗಳಲ್ಲಿ ಎಪ್ಪತ್ತು ಶೇಕಡಾ ಜನತೆ ಬಡತನದ ರೇಖೆಯ ಕೆಳಗೆ ಹಸಿವಿನ ನರಕಯಾತನೆ ಅನುಭವಿಸುತ್ತಿದ್ದಾರೆ, ಹೊಟ್ಟೆಗಿಲ್ಲದೆ, ಕಷ್ಟಕೋಟಲೆಗಳಿಗೀಡಾಗಿ ಸಾಯುತ್ತಿದ್ದಾರೆ ಎಂಬುದು ನಿರ್ವಿವಾದ ಮತ್ತು ನಾಚಿಕೆಗೇಡಿನ ಸಂಗತಿ.

ಇವೆಲ್ಲಕ್ಕೂ ಹೆಚ್ಚಾಗಿ, ನ್ಯೂಕ್ಲಿಯರ್ ಯುದ್ಧ ನಡೆಸಲು ಹವಣಿಸುತ್ತಿರುವ ಶಕ್ತಿಗಳನ್ನು ಜಾಗತಿಕ ಶಾಂತಿಯ ರಕ್ಷಣೆಗೆ ನಿಂತಿರುವ ಶಕ್ತಿಗಳು ಸರಿಯಾದ ಸಮಯದಲ್ಲಿ ಸೋಲಿಸುವಲ್ಲಿ ವಿಫಲಗೊಂಡರೆ ಸಮಸ್ತ ಮಾನವ ಕುಲವೇ ಅಣು ಯುದ್ಧ ಭುಗಿಲ್ಲೆನ್ನುವ ಪ್ರಾಣಾಂತಿಕ ಅಪಾಯದ ಹಿಡಿತಕ್ಕೊಳಗಾಗಿದೆ.

ಸಾರ್ವತ್ರಿಕ ಬಿಕ್ಕಟ್ಟು

ಜಾಗತಿಕ ಬಂಡವಾಳ ಶಾಹಿಯ ಸದ್ಯದ ಬಿಕ್ಕಟ್ಟಿನ ರಾಕ್ಷಸೀ ಸ್ವರೂಪಗಳನ್ನು ಕಾಣದೆ "ಕಲ್ಯಾಣ ಬಂಡವಾಳ ಶಾಹಿ" ಕೀನ್ಸ್‌ರ ಪರಿಹಾರಗಳು, "ಬಿಕ್ಕಟ್ಟು ರಹಿತ ಬಂಡವಾಳ ಶಾಹಿ" ಇತ್ಯಾದಿಗಳ ಪರಾಕುಗೀತೆ ಯಾರಾದರೂ ಇನ್ನೂ ಹಾಡುತ್ತಿದ್ದರೆ ಅಂತಹವರಿಗೆ ತಿಳಿ ಹೇಳುವುದು ಯಾರಿಗೂ ಸಾಧ್ಯವಿಲ್ಲ.

ಮಾರ್ಕ್ಸ್ ಹಾಗೂ ಎಂಗೆಲ್ಸ್ ಭವಿಷ್ಯ ನುಡಿದಿದ್ದ ಹತ್ತು ವರ್ಷಗಳ ಅಥವಾ ಐದು ವರ್ಷಗಳ ಆವರ್ತನೆಗಳ ಮಾತನ್ನು ಗಿಳಿಗಳಂತೆ ಪುನರುಚ್ಚರಿಸುತ್ತಾ, ಕಳೆದ ಕಾಲು ಶತಮಾನಕ್ಕೂ ಮಿಕ್ಕಿದ ಅವಧಿಯಲ್ಲಿ ನಡೆದಿರುವ ತಂತ್ರಜ್ಞಾನದಲ್ಲಿನ ಕ್ರಾಂತಿ ಹಾಗೂ ಬಂಡವಾಳ ಶಾಹೀ ಉತ್ಪಾದನೆಯಲ್ಲಿನ ಬೃಹತ್ ಪ್ರಮಾಣದ ವಿಸ್ತರಣೆಯನ್ನು ಕಂಡು ಅವಾಕ್ಕಾಗುವವರು ಮಾರ್ಕ್ಸ್‌ವಾದೀ ಸಿದ್ಧಾಂತವನ್ನೂ ಅರಿತಿಲ್ಲ, ಬಂಡವಾಳಶಾಹಿ ಬಿಕ್ಕಟ್ಟನ್ನು ಕುರಿತಾಗಿ ಆ ಸಿದ್ಧಾಂತ ನಡೆಸಿರುವ ವಿಶ್ಲೇಷಣೆಯನ್ನೂ ಅರಿತಿಲ್ಲ.

ಪ್ರತೀ ಐದು ಅಥವಾ ಹತ್ತು ವರ್ಷಗಳಿಗೊಮ್ಮೆ ಪುನರಾವರ್ತನೆಗೊಳ್ಳಬಹುದೆಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ನಿರೀಕ್ಷಿಸಿದ್ದ ಬಂಡವಾಳ ಶಾಹಿ ಬಿಕ್ಕಟ್ಟಿನ ಆವರ್ತಗಳ ಸ್ಥಾನದಲ್ಲಿ ಈಗ ಪ್ರತಿಯೊಂದು ಬಂಡವಾಳ ಶಾಹಿ ವ್ಯವಸ್ಥೆಯಲ್ಲಿಯೂ ಸಾರ್ವತ್ರಿಕ ಬಿಕ್ಕಟ್ಟನ್ನು ಕಾಣಬಹುದಾಗಿದೆ. ಕಳೆದ ದಶಕದಲ್ಲಿ ಜಾಗತಿಕ ಬಂಡವಾಳ ಶಾಹಿ ಅರ್ಥ ವ್ಯವಸ್ಥೆಯಲ್ಲಿ ಪ್ರತಿ ಒಂದು ಅಥವಾ ಎರಡು ವರ್ಷಗಳಿಗೊಮ್ಮೆ "ಹಿಂಜರಿತ" ಮತ್ತು "ಸುಧಾರಣೆ" ಬಾರಿ ಬಾರಿಗೆ ಒಂದನ್ನೊಂದು ಹಿಂಬಾಲಿಸುತ್ತಿವೆ ಎಂಬುದನ್ನು ಸಾಮಾನ್ಯರೂ ಕಾಣುತ್ತಿದ್ದಾರೆ. ಆದಾಗ್ಯೂ ಬಂಡವಾಳ ಶಾಹಿ ಬಿಕ್ಕಟ್ಟಿನ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ನಿರಾಕರಿಸುವಲ್ಲಿ ಸಂತೋಷ ಪಡುವ, ತಮ್ಮನ್ನು ಸಮಾಧಾನ ಮಾಡಿಕೊಳ್ಳಲು ಹಾಗೂ ಅಜ್ಞಾನಿಗಳನ್ನು ದಿಕ್ಕು ತಪ್ಪಿಸಲು ಹೊಸ ಹೊಸ ಸಿದ್ಧಾಂತಗಳನ್ನು ನೇಯುವ ಬಂಡವಾಳ ಶಾಹಿಯ ನಾಚಿಕೆಗೆಟ್ಟ ಸಮರ್ಥಕರೂ ಇದ್ದಾರೆ!

ಬಂಡವಾಳ ಶಾಹಿ ಸಮಾಜವ್ಯವಸ್ಥೆಯೊಳಗೆ ಬೇರೂರಿರುವ ಆಂತರಿಕ ವೈರುಧ್ಯಗಳಿಂದಾಗಿಯೇ ಆ ಸಮಾಜ ವಿಘಟನೆಗೊಂಡು ಅಂತಿಮವಾಗಿ ಅದರ ಸ್ಥಾನದಲ್ಲಿ ಸಮಾಜವಾದಿ ವ್ಯವಸ್ಥೆ ಬರುತ್ತದೆ ಎಂಬ ಮಾರ್ಕ್ಸ್‌ವಾದೀ ವಿಶ್ಲೇಷಣೆಯನ್ನು ತಿರುಚಿ ಅಪಾರ್ಥ ಕೊಟ್ಟು ಬಂಡವಾಳ ಶಾಹಿಯ ಬಿಕ್ಕಟ್ಟು ಬಂಡವಾಳ ಶಾಹಿ ಉತ್ಪಾದನೆಯ ಪ್ರಗತಿಗೆ ಅಡ್ಡಿಯಾಗಿ ಅದು ಗಕ್ಕನೆ ಸ್ಥಗಿತ ಗೊಳ್ಳುತ್ತದೆ ಎಂದು ಮಾರ್ಕ್ಸ್‌ವಾದಿಗಳು ಭವಿಷ್ಯ ನುಡಿಯುತ್ತಾರೆಂದು ಸುಳ್ಳು ಹೇಳಲಾಗುತ್ತಿದೆ; ವ್ಯತಿರಿಕ್ತವಾಗಿ ಬಂಡವಾಳ ಶಾಹಿ ಉತ್ಪಾದನಾ ಶಕ್ತಿಗಳು ವಿಸ್ಮಯಕಾರೀ ಮುನ್ನಡೆ ಸಾಧಿಸುತ್ತಿವೆಯಲ್ಲಾ ಎಂದು ಕೇಳಲಾಗುತ್ತಿದೆ.

"ಕಮ್ಯೂನಿಸ್ಟ್ ಮೆನಿಫೆಸ್ಟೋ"ದಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಹೇಳಿರುವ ಈ ಮಾತುಗಳನ್ನು ಗಮನಿಸಿ– "ಉತ್ಪಾದನೆಯ ಸಾಧನಗಳನ್ನು, ತನ್ಮೂಲಕ ಉತ್ಪಾದನಾ ಸಂಬಂಧಗಳನ್ನು ಅದರೊಂದಿಗೇ ಸಮಾಜದ ಸಮಸ್ತ ಸಂಬಂಧಗಳನ್ನು ಸತತವಾಗಿ ಕ್ರಾಂತಿಕಾರಕಗೊಳಿಸದೆ ಬೂರ್ಜ್ವಾವರ್ಗ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಉತ್ಪಾದನೆಯಲ್ಲಿ ಸತತ ಕ್ರಾಂತಿಕಾರಕತೆ, ಎಲ್ಲಾ ಸಾಮಾಜಿಕ ಸ್ಥಿತಿಗತಿಗಳಲ್ಲಿ ಅಡೆತಡೆಯಿಲ್ಲದ ಅಲ್ಲೋಲ–ಕಲ್ಲೋಲ ಮತ್ತು ಸದಾ ಕಂಡು ಬರುವ ಅನಿಶ್ಚಿತತೆ ಮತ್ತು ಉದ್ರಿಕ್ತತೆ ಇವು ಬಂಡವಾಳ ಶಾಹಿ ಯುಗವನ್ನು ಅದರ ಹಿಂದಿನ ಯುಗಗಳಿಂದ ಪ್ರತ್ಯೇಕಿಸುವ ವಿಶಿಷ್ಟ ಲಕ್ಷಣಗಳು."

ಪ್ರಸ್ತುತ ಯುಗದಲ್ಲಿ

ಸದ್ಯದ ಯುಗದಲ್ಲಿ, ಬಂಡವಾಳ ಶಾಹಿ ಹಾಗೂ ಸಾಮ್ರಾಜ್ಯಶಾಹಿ ಮುರಿದು ಬಿದ್ದು, ಜಾಗತಿಕ ಪ್ರಮಾಣದಲ್ಲಿ ಸಮಾಜವಾದ ಮತ್ತು ಕಮ್ಯೂನಿಸಂನ ಅಂತಿಮ ವಿಜಯದ ಈ ಯುಗದಲ್ಲಿ ಮೇಲೆ ಹೇಳಿರುವ ಬಂಡವಾಳ ಶಾಹಿಯ ಲಕ್ಷಣಗಳು ಅದೃಶ್ಯವಾಗುವುದಿಲ್ಲ; ಬದಲಿಗೆ, ಅದಕ್ಕೆ ಮತ್ತಷ್ಟು ಒತ್ತು ಬೀಳುತ್ತದೆ. ಎರಡನೇ ಜಾಗತಿಕ ಯುದ್ಧಾನಂತರದ ದಶಕಗಳಲ್ಲಿ ಮಹಾನ್ ತಾಂತ್ರಿಕ ಕ್ರಾಂತಿಯ ಹೆಸರಲ್ಲಿ ಜರುಗುತ್ತಿರುವುದು ಇದೇ. ಇದು ಬಂಡವಾಳಶಾಹಿ ಜಗತ್ತಿನ ಮೇಲೂ ಭಾರೀ ಪರಿಣಾಮ ಬೀರುತ್ತಿದೆ. ಮಾತ್ರವಲ್ಲ, ಸಮಾಜವಾದದ ದೇಶಗಳ ಮೇಲೂ ಪ್ರಭಾವ ಬೀರುತ್ತಿದೆ.

ಈ ತಾಂತ್ರಿಕ ಕ್ರಾಂತಿ ಮತ್ತು ತತ್ಪರಿಣಾಮವಾಗಿ ಕೈಗಾರಿಕಾ ಉತ್ಕರ್ಷ ಆ ದೇಶಗಳ ಅರ್ಥವ್ಯವಸ್ಥೆ, ರಾಜಕೀಯ ಹಾಗೂ ಸಿದ್ಧಾಂತಗಳನ್ನು ತಟ್ಟಿದ ಬಂಡವಾಳ ಶಾಹಿಯ ಸಾರ್ವ-

ತ್ರಿಕ ಬಿಕ್ಕಟ್ಟಿನ ಸಮಯದಲ್ಲೇ ನಡೆಯಿತೆಂಬುದು ನಿಜ, ಆದರೆ ಈ "ಉತ್ಕರ್ಷ" ಬಂಡವಾಳಶಾಹಿಯು ಸಾರ್ವತ್ರಿಕ ಬಿಕ್ಕಟ್ಟನ್ನೇನೂ ನಿರಾಕರಿಸುವುದಿಲ್ಲ. ಇದುವರೆಗೆ ನಡೆದು ಇನ್ನೂ ನಡೆಯುತ್ತಿರುವ ತಾಂತ್ರಿಕ ಕ್ರಾಂತಿ ಬಂಡವಾಳಶಾಹಿಯ ಸಾರ್ವತ್ರಿಕ ಬಿಕ್ಕಟ್ಟಿನ ಪರಿಸ್ಥಿತಿಗಳ ಒಂದು ಅಂಗವೇ ಆಗಿದೆಯಲ್ಲದೆ ಅದು ಮೂರನೇ ಹಂತ ಪ್ರವೇಶಿಸಿದಾಗ ಅಗತ್ಯವಾಗುವ ಸಂಗತಿಯೂ ಆಗಿದೆ. ಈ ಹಂತದ ಲಕ್ಷಣಗಳನ್ನು ಮಾರ್ಕ್ಸ್‌ವಾದೀ ವಿಶ್ಲೇಷಕರು ಹೀಗೆ ವಿವರಿಸಿದ್ದಾರೆ ಸಮಾಜವಾದದೊಡನೆ ಆರ್ಥಿಕ ಸ್ಪರ್ಧೆಯಲ್ಲಿ ಅದರ ಸ್ಥಾನ ದುರ್ಬಲಗೊಳ್ಳುತ್ತದೆ, ಹಳೆಯ ವಸಾಹತು ಶಾಹಿ ವ್ಯವಸ್ಥೆ ಮುರಿದುಬೀಳುತ್ತದೆ. ಸಾಮ್ರಾಜ್ಯ ಶಾಹಿಯ ಎಲ್ಲಾ ವೈರುಧ್ಯಗಳು ತೀವ್ರಗೊಳ್ಳುತ್ತವೆ ಮತ್ತು ಆರ್ಥಿಕ ವ್ಯವಸ್ಥೆಯ ಅಸ್ಥಿರತೆ ಸದಾ ಬೆಳೆಯುತ್ತಿರುತ್ತದೆ. ಈ ಸಂದರ್ಭದಲ್ಲಿ ಸದಾ ಏರುತ್ತಿರುವ ಹಣದುಬ್ಬರ ಮತ್ತು ಬೆಲೆಯೇರಿಕೆಯೊಂದಿಗೆ ಉತ್ಪಾದನೆಯಲ್ಲಿ ಸ್ಥಗಿತತೆ ಕಂಡು ಬರುತ್ತದೆ, ನಿರುದ್ಯೋಗ ಹೆಚ್ಚಿ ತೀವ್ರಗೊಳ್ಳುತ್ತದೆ, ತಮ್ಮ ಸಾಮಾಜಿಕ-ಆರ್ಥಿಕ ಬೇಡಿಕೆಗಳಿಗಾಗಿ ಕಾರ್ಮಿಕರ ಹೋರಾಟ ಹೆಚ್ಚುತ್ತಾ ಹೋಗುತ್ತದೆ ಮತ್ತು ಸಾಮ್ರಾಜ್ಯ ಶಾಹಿಯ ರಾಜಕೀಯ ತಾತ್ತ್ವಿಕ ಬಿಕ್ಕಟ್ಟು ಯಾವ ಪರಿಹಾರವನ್ನೂ ಕಾಣದಾಗುತ್ತದೆ.

ಮಾರ್ಕ್ಸ್ ಹಾಗೂ ಮಾರ್ಕ್ಸ್‌ವಾದೀ ಸಿದ್ಧಾಂತದ ಟೀಕಾಕಾರರು ಮತ್ತು ಟೀಕಾಕಾರರೆಂಬ ಮುಖವಾಡ ತೊಟ್ಟವರು ಚಿಂತನಶೀಲ ಮಾನವ ಕುಲಕ್ಕೆ ಹೊಸ ದೃಷ್ಟಿ ಕ್ಷೇತ್ರವನ್ನೇ ತೆರೆದುಕೊಟ್ಟ ಈ ಮಹಾನ್ ಸಿದ್ಧಾಂತದ ತಿರುಳನ್ನು ಅರ್ಥ ಮಾಡಿಕೊಳ್ಳುವ ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಕೆಲವು ಸಣ್ಣ-ಪುಟ್ಟ ಪ್ರತ್ಯೇಕ ನಿರೂಪಣೆಗಳ ಮೇಲೆ ಮುಗಿ ಬೀಳುತ್ತಾರೆ. ಈ ನಿರೂಪಣೆಗಳು ಮಾರ್ಕ್ಸ್ ಮತ್ತು ಎಂಗೆಲ್ಸರ ಸಿದ್ಧಾಂತದ ವೈಜ್ಞಾನಿಕ ಭಾಗವೇನೂ ಆಗಿಲ್ಲ. ಮಾರ್ಕ್ಸ್‌ರ ಈ 'ಭ್ರಮೆಗಳು ಹಾಗೂ ತಪ್ಪುಗಳ" ವಿಚಾರವನ್ನು ಮುಗಿಸುವ ಮೊದಲು ಈ ವಿಚಾರದಲ್ಲಿ 20ನೇ ಶತಮಾನದ ಆ ಮಹಾನ್ ಮಾರ್ಕ್ಸ್‌ವಾದಿ ಲೆನಿನ್ ಏನು ಹೇಳಿದ್ದಾರೆ ಎಂಬುದನ್ನು ಇಲ್ಲಿ ತಿಳಿಯ ಪಡಿಸಿದರೆ ಪ್ರಯೋಜನವಾದೀತು.

"ಹೌದು. ಮಾರ್ಕ್ಸ್ ಮತ್ತು ಎಂಗೆಲ್ಸ್ ಕ್ರಾಂತಿ ಎಷ್ಟು ಸಮೀಪವಾಗುತ್ತಿದೆ ಎಂಬುದರ ಬಗ್ಗೆ ಕ್ರಾಂತಿಯ ವಿಜಯದ ಅವರ ನಿರೀಕ್ಷೆಗಳಲ್ಲಿ ಬಹಳ ತಪ್ಪುಗಳನ್ನು ಆಗಾಗ ಮಾಡಿದ್ದಾರೆ. ಉದಾಹರಣೆಗೆ, 1848 ರಲ್ಲಿ ಜರ್ಮನಿಯಲ್ಲಿ ಜರ್ಮನ್ "ಗಣರಾಜ್ಯ'ವೊಂದು ಇನ್ನೇನು ಸ್ಥಾಪನೆಗೊಳ್ಳಲಿದೆಯೆಂಬ ಅವರ ನಿರೀಕ್ಷೆಯಲ್ಲಿ... 1871 ರಲ್ಲಿ ದಕ್ಷಿಣ ಪ್ಯಾರಿಸ್ಸಿನಲ್ಲಿ ಬಂಡಾಯವೇಳುವುದರಲ್ಲಿ ನಿರತರಾಗಿದ್ದಾಗ ತಪ್ಪು ಮಾಡಿದರು............

ಆದರೆ ಕ್ರಾಂತಿಕಾರಿ ವಿಚಾರಧಾರೆಯ ಈ ವಿರಾಟ್ ಪುರುಷರ ಇಂತಹ ತಪ್ಪುಗಳು ಅಧಿಕೃತ ಉದಾರವಾದಿಗಳ ಅಲ್ಪ ಬುದ್ಧಿ ಮತ್ತೆಗಿಂತ ಚಾರಿತ್ರಿಕವಾಗಿ ಹೆಚ್ಚು ಸತ್ಯವಾದ ರೀತಿಯಲ್ಲಿ ಮತ್ತು ಹೆಚ್ಚು ಮೌಲ್ಯ ಪೂರ್ಣವಾಗಿ ಸಮಸ್ತ ಜಗತ್ತಿನ ಕಾರ್ಮಿಕ ವರ್ಗವನ್ನು ಕ್ಷುದ್ರ, ಸಾಮಾನ್ಯ, ನಿರರ್ಥಕ ಉದ್ದೇಶಗಳಿಂದ ಮೇಲೆತ್ತಿ ಅದಕ್ಕಿಂತ ಸಾವಿರ ಪಟ್ಟು ಶ್ರೇಷ್ಠವಾದ, ಘನವಾದ ಮಟ್ಟಕ್ಕೆ ತಲುಪಿಸಿವೆ. ಅಧಿಕೃತ ಉದಾರವಾದಿಗಳ ಅಲ್ಪ ಬುದ್ಧಿ ಮತ್ತೆ ಕ್ರಾಂತಿಕಾರಿ ನಿರರ್ಥಕತೆಯ ಪೊಳ್ಳುತನದ ಬಗ್ಗೆ, ಕ್ರಾಂತಿಕಾರಿ ಹೋರಾಟದ ನಿರರ್ಥಕತೆಯ ಬಗ್ಗೆ, ಪ್ರತಿಕ್ರಾಂತಿಯ ಹೋರಾಟದ ಮನಮೋಹಕತೆಯ ಬಗ್ಗೆ, ಪ್ರತಿಕ್ರಾಂತಿಕಾರಿ "ಸಂವೈಧಾನಿಕ" ಕೊಳೆತಪ ಮೋಹಕತೆಯ ಬಗ್ಗೆ ಹಾಡುತ್ತದೆ, ಅರಚುತ್ತದೆ, ಬಿನ್ನವಿಸಿ ಕೊಳ್ಳುತ್ತದೆ ಮತ್ತು ಗೊಣಗುಟ್ಟುತ್ತದೆಯಷ್ಟೆ!" (ಲೆನಿನ್ 1907 ರ ಏಪ್ರಿಲ್ 6 ರಲ್ಲಿ ಬರೆದ ಮುನ್ನುಡಿಯೊಂದರಿಂದ ಉದ್ಧೃತ)

ಎಂಗೆಲ್ಸ್ ತನ್ನದೇ ಆದ ಶೈಲಿಯಲ್ಲಿ ತನ್ನ ಕೃತಿ "ಇಂಗ್ಲೆಂಡಿನಲ್ಲಿ ಕಾರ್ಮಿಕ ವರ್ಗದ ಸ್ಥಿತಿ-ಗತಿ"ಯ ಮುನ್ನುಡಿಯಲ್ಲಿ 1892 ರಲ್ಲಿ ಹೀಗೆ ಬರೆದಿದ್ದಾರೆ- "ನನ್ನ ಯೌವನದ ಉತ್ಸಾಹದಲ್ಲಿ ನಾನು ಧೈರ್ಯ ಮಾಡಿ ನಿರೀಕ್ಷಿಸಿದ ಆ ಹಲವು ಭವಿಷ್ಯ ನುಡಿಗಳನ್ನು ಈ ಕೃತಿಯಿಂದ ತೆಗೆದು ಹಾಕದಂತೆ ನಾನು ಜಾಗ್ರತೆ ವಹಿಸಿದ್ದೇನೆ. ಇವುಗಳಲ್ಲಿ ಇಂಗ್ಲೆಂಡಿನಲ್ಲಿ ಸಾಮಾಜಿಕ ಕ್ರಾಂತಿ ಸಂಭವಿಸಲಿದೆಯೆಂಬ ನಿರೀಕ್ಷೆಯೂ ಸೇರಿದೆ. ಆಶ್ಚರ್ಯದ ಸಂಗತಿಯೆಂದರೆ ಅವುಗಳಲ್ಲಿ ಹಲವು ತಪ್ಪಾದುವು ಎಂದಲ್ಲ, ಹಲವಾರು ಸರಿಯಾದುದು ಸಿದ್ಧವಾಗಿದೆಯಲ್ಲಾ ಎಂಬುದು...."

ನಿರುತ್ತರಗೊಳಿಸುವಷ್ಟು ಆತ್ಮ ವಿಮರ್ಶಾತ್ಮಕವಾದ, ವಸ್ತು ನಿಷ್ಠವಾದ ಮಾತುಗಳಿವು.

ವ್ಯಕ್ತಿ ಪೂಜೆ ಅಲ್ಲ

ಮಾನವ ಕುಲದ ಇತಿಹಾಸದಲ್ಲಿ ಕಾರ್ಲ್‌ಮಾರ್ಕ್ಸ್ ತನ್ನ ಹೆಸರನ್ನು ಕೆತ್ತಿ ಬಿಟ್ಟಿದ್ದಾರೆ. ಅದನ್ನು ಅಳಿಸುವುದು ಮುಂಬರುವ ಯಾವನೇ ವಿಧ್ವಂಸಕನಿಗೆ ಸಾಧ್ಯವಿಲ್ಲ. ಮಾರ್ಕ್ಸ್ ಮಾನವೇತಿಹಾಸದ ಬೆಳವಣಿಗೆಯ ನಿಯಮವನ್ನು ಕಂಡು ಹಿಡಿದರು. ಚಿಂತನಶೀಲ ಮಾನವಕುಲಕ್ಕೆ ಧ್ರುವತಾರೆಯಾಗಿಯೇ ಉಳಿದಿರುವ ನಿಯಮವಿದು. ಇದು ಮತ್ತು ಸಂಬಂಧಪಟ್ಟ ಇತರ ಸಂಶೋಧನೆಗಳು ಒಂದು ಹಗಲು ಇದ್ದಕ್ಕಿದ್ದಂತೆ ಮೇಧಾವಿ ಮಾರ್ಕ್ಸ್‌ರ ತಲೆಯಲ್ಲಿ ಸ್ಫುರಣೆಗೊಂಡ ಸಂಶೋಧನೆಗಳೇನಲ್ಲ. ಮಾನವ ಕುಲ ಈ ಒಂದು ಸಂಶೋಧನೆಯ ಹುಡುಕಾಟದಲ್ಲಿ ತೊಡಗಿತ್ತು; ಬಹಳ ಕಾಲದಿಂದ ಇದಕ್ಕೆ ಆವಶ್ಯಕವಾದ ಭೌತಿಕ ಪರಿಸ್ಥಿತಿಗಳನ್ನು ಸಿದ್ಧಗೊಳಿಸುತ್ತಿತ್ತು. ಮಾರ್ಕ್ಸ್‌ರ ಈ ಸಂಶೋಧನೆಯನ್ನು ಚರಿತ್ರೆಯಲ್ಲಿ ಅತ್ಯಂತ ಯೋಗ್ಯವಾದ ಸ್ಥಾನದಲ್ಲಿರಿಸುತ್ತಾ, ಎಂಗೆಲ್ಸ್ ನೀಡಿರುವ ಉಜ್ವಲ ಚಾರಿತ್ರಿಕ ಭೌತವಾದೀ ಹೇಳಿಕೆ ಹೀಗಿದೆ- "ಮಾರ್ಕ್ಸ್ ಇತಿಹಾಸದ ಭೌತವಾದೀ ಪರಿಕಲ್ಪನೆಯನ್ನು ಕಂಡು ಹಿಡಿದರು. ಆದರೆ ಥಿಎರಿ, ಮಿಗ್ನೆಟ್, ಗಿರ್ಝೋ ಹಾಗೂ 1850 ರ ವರೆಗಿನ ಎಲ್ಲಾ ಇಂಗ್ಲಿಷ್ ಇತಿಹಾಸಕಾರರು ಇಂತಹದೊಂದು ಪರಿಕಲ್ಪನೆಯ ಸಂಶೋಧನೆಯ ಪ್ರಯತ್ನ ನಡೆಯುತ್ತಿತ್ತು ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ. ಮತ್ತು ಮಾರ್ಗನ್ ಕೂಡಾ ಇದೇ ಪರಿಕಲ್ಪನೆಯನ್ನು ಕಂಡು ಹಿಡಿದರೆಂಬುದು ಇಂತಹ ಒಂದು ಸಂಶೋಧನೆಗೆ ಸಮಯ ಪಕ್ವವಾಗಿತ್ತು ಮತ್ತು ಅದನ್ನು ಕಂಡು ಹಿಡಿಯಲೇ ಬೇಕಾಗಿತ್ತು ಎಂಬುದನ್ನು ತೋರಿಸಿಕೊಡುತ್ತದೆ."

ನಾವು ಮಾರ್ಕ್ಸ್‌ವಾದಿಗಳು. ಮಾರ್ಕ್ಸ್ ಮರಣ ಶತಾಬ್ಧಿಯನ್ನು ಆಚರಿಸುತ್ತಾ ಮಾರ್ಕ್ಸ್‌ರ ಸಿದ್ಧಾಂತಕ್ಕೆ ದುಡಿಯುವ ಮತ್ತು ಶೋಷಿತ ಜನತೆಯ ವಿಮೋಚನೆಗೆ, ಆ ಮೂಲಕ ಅಂತಿಮವಾಗಿ ಮಾನವ ಕುಲವನ್ನು ಅನಾದಿ ಕಾಲದ ಅಜ್ಞಾನದಿಂದ, ಬಡತನದಿಂದ, ಸಮಾಜದಲ್ಲಿನ ಶತಮಾನಗಳ ವರ್ಗ ಸಮರದಿಂದ ವಿಮೋಚನೆಗೊಳಿಸಲು ವೈಜ್ಞಾನಿಕವಾಗಿ ದಾರಿ ತೋರುತ್ತಿರುವ ಸಿದ್ಧಾಂತಕ್ಕೆ ಅತ್ಯುನ್ನತ ನೆನಕೆ ಸಲ್ಲಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ವೈಭವೀಕರಿಸುವುದಲ್ಲ, ಅಥವಾ ಮಾರ್ಕ್ಸ್‌ರ ವ್ಯಕ್ತಿತ್ವದ ಸುತ್ತ ನಡೆಸುವ ವ್ಯಕ್ತಿ ಪೂಜೆ ಅಲ್ಲ. "ವ್ಯಕ್ತಿ ಪೂಜೆಗಳೆಲ್ಲಾ ನಮ್ಮಿಂದ ದೂರವಿರಲಿ, ಆದರೆ ಗೌರವಕ್ಕೆ ಅರ್ಹರಾದವರಿಗೆ ಗೌರವ ಸಲ್ಲಲಿ" ಎಂಬುದು ಮಾರ್ಕ್ಸ್‌ವಾದಿಗಳ ನೀತಿ.

ವ್ಯಕ್ತಿ ಪೂಜೆಯೆಂಬುದು ಹಲವು ಕಮ್ಯೂನಿಸ್ಟ್ ಪಕ್ಷಗಳನ್ನು ಹಾಗೂ ಅವುಗಳ ಕೆಲವು ಉಜ್ವಲ ಮುಂದಾಳುಗಳನ್ನು ಪೀಡಿಸುತ್ತಿರುವ ಒಂದು ಕೆಡುಕು. ಮಾರ್ಕ್ಸ್ ಮತ್ತು ಎಂಗೆಲ್ಸ್ ಇದರ ವಿರುದ್ಧ ಯಾವ ರೀತಿಯ ನೀತಿಬದ್ಧ ನಿಲುವನ್ನು ತಳೆದಿದರೆಂಬುದನ್ನು ಜಗತ್ತಿನಾದ್ಯಂತ ಮರಣ ಶತಾಬ್ಧಿ ಆಚರಿಸಿದ ಮಾರ್ಕ್ಸ್‌ವಾದಿಗಳು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಾರೆ.

ಡಬ್ಲ್ಯೂ. ಬ್ಲೋಸ್ ಎಂಬುವರಿಗೆ ಪತ್ರ ಬರೆಯುತ್ತಾ 1877ರ ನವಂಬರ್ 10 ರಂದು ಮಾರ್ಕ್ಸ್ "ಇದಕ್ಕೆ ಸಾಕ್ಷಿಯೆಂದರೆ, ಉದಾಹರಣೆಗೆ, ಯಾವುದೇ ವ್ಯಕ್ತಿ ಪೂಜೆ ನನಗೆ ಅಪಥ್ಯವಾಗಿದ್ದುದರಿಂದ ಇಂಟರ್ ನ್ಯಾಶನಲ್‌ನ ಅಸ್ತಿತ್ವದ ಸಮಯದಲ್ಲಿ ಹಲವಾರು ದೇಶಗಳಿಂದ ನನ್ನನ್ನು ಮುತ್ತಿದ್ದ ಶ್ಲಾಘನೆಯ ಹಲವಾರು ಅಭಿವ್ಯಕ್ತಿಗಳು ಪ್ರಚಾರದ ಹಂತ ತಲುಪಲು ಅನುಮತಿ ನೀಡಲಿಲ್ಲ; ಅಲ್ಲೊಮ್ಮೆ ಇಲ್ಲೊಮ್ಮೆ ಬೈದುದಲ್ಲದೆ ಅದಕ್ಕೆ ಎಂದೂ ಉತ್ತರಿಸಲಿಲ್ಲ. ಗುಪ್ತ ಕಮ್ಯೂನಿಸ್ಟ್ ಸೊಸೈಟಿ ಸೇರುವಾಗ ಯಾವುದೇ ಪ್ರಮಾಣ ವಾಕ್ಯದಲ್ಲಿ ಮೂಢನಂಬಿಕೆ ಪ್ರೋತ್ಸಾಹಿಸುವಂತಹದೆಲ್ಲವನ್ನೂ ನಿಯಮಾವಳಿಯಿಂದ ತೆಗೆದು ಹಾಕಬೇಕೆಂದು ಎಂಗೆಲ್ಸ್ ಮತ್ತು ನಾನು ಶರತ್ತು ಹಾಕಿದ್ದೆವು" ಎಂದಿದ್ದಾರೆ.

ವ್ಯಕ್ತಿ ಪೂಜೆಯ ಪರಿಣಾಮ

ತಮ್ಮ ಚಾರಿತ್ರಿಕ ಹಾಗೂ ದ್ವಂದ್ವ ಮಾನ ಭೌತಿಕ ದೃಷ್ಟಿಕೋನದ ಬಗ್ಗೆ ಹೆಮ್ಮೆ ಪಡುವವರಿಗೆ ವ್ಯಕ್ತಿಪೂಜೆಯ ಈ ಕೆಡುಕು ಕೇವಲ ನೈತಿಕ ಪ್ರಶ್ನೆ ಅಲ್ಲ. ಇದು ಕೆಲವು ಅತೀ ದೊಡ್ಡ ಕಮ್ಯೂನಿಸ್ಟ್ ಪಕ್ಷಗಳಲ್ಲಿ ಟೀಕೆ ಮತ್ತು ಸ್ವಯಂ ಟೀಕೆಯನ್ನು ಕುಂಠಿತಗೊಳಿಸಿತು. ಅತ್ಯುನ್ನತ ಕಮ್ಯೂನಿಸ್ಟ್ ಮುಂದಾಳುಗಳು ಇದಕ್ಕೆ ಬಲಿಯಾಗಿ ಪಕ್ಷದೊಳಗಣ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ನಾಶಗೊಂಡಿತು. ಮುಂದಾಳು 'ಅತಿ ಮಾನವ"ನ ಮಟ್ಟಕ್ಕೇರಿಸಲ್ಪಟ್ಟ. ಅವನು ಎಂದೂ ತಪ್ಪು ಮಾಡಲಾರ. ಆಜೀವ ಪರ್ಯಂತ ವಿರಾಟ್ ಚಿಂತಕನಾಗಿ ಆತನ ಪ್ರತಿಯೊಂದು ಮಾತು ಅಭೇದ್ಯ, ಅಲಂಘ್ಯ ಸತ್ಯವಾಗಿ ಬಿಟ್ಟಿತು. ಇವೆಲ್ಲಾ ಸಮಾಜವಾದದ ಮಹಾನ್ ಧ್ಯೇಯಕ್ಕೆ ಬೃಹತ್ ಪ್ರಮಾಣದಲ್ಲಿ ಧಕ್ಕೆಯುಂಟು ಮಾಡಿ ಅಂತರ್‌ರಾಷ್ಟ್ರೀಯ ಕಾರ್ಮಿಕ ವರ್ಗದ ದುಷ್ಟ ವರ್ಗ ಶತ್ರುಗಳಿಗೆ ಪ್ರಚಾರಯಂತ್ರಕ್ಕೆ ಆಹಾರವೊದಗಿಸಿದವು.

ಕೆಲವು ಕಮ್ಯೂನಿಸ್ಟ್ ಮುಂದಾಳುಗಳ ಮೇಲೆ ಈಗಲೂ ಅಸತ್ಯ, ಜುಗುಪ್ಸೆ ಹುಟ್ಟಿಸುವ ಅಸಂಬದ್ಧ ಪರಾಕುಗಳನ್ನು ಓದುವಾಗ ನನಗೆ ಎಷ್ಟೊಂದು ಹೀನಭಾವ ಮತ್ತು ಬಿನ್ನತೆ ಮೂಡುತ್ತದೆ! ಸಂಬಂಧಪಟ್ಟ ಆ ಮುಂದಾಳುಗಳು ಶಾಂತ ಭಾವದಿಂದ ಈ ಭಟ್ಟಂಗಿತನದ ಆನಂದ ಪಡೆಯುತ್ತಿದ್ದಾರೆ!

ಮಾರ್ಕ್ಸ್‌ರ ಅತ್ಯಂತ ಅನೂಲ್ಯ ಹಾಗೂ ಆಜೀವ ಪರ್ಯಂತ ಮಿತ್ರರಾಗಿದ್ದ ಎಂಗೆಲ್ಸ್ ಮಾರ್ಕ್ಸ್‌ರ ಸಮಾಧಿಯ ಬಳಿ ಮಾಡಿದ ತನ್ನ ಸುಪ್ರಸಿದ್ಧ ಭಾಷಣದಲ್ಲಿ ಹೀಗೆಂದಿದ್ದರು— "ತನ್ನ ಕಾಲದಲ್ಲಿ ಅತ್ಯಂತ ದ್ವೇಷಕ್ಕೆ, "ಪನಿಂದೆಗೆ ಗುರಿಯಾದ ವ್ಯಕ್ತಿಯಾಗಿದ್ದ ಮಾರ್ಕ್ಸ್. ಬೂರ್ಜ್ವಾಗಳು, ಅತನು ಸಂಪ್ರದಾಯ ನಿಷ್ಠರೇ ಆಗಿರಲಿ ಅತಿ ಜನತಂತ್ರವಾದಿಗಳೇ ಆಗಿರಲಿ ಆತನ ಮೇಲೆ ಮಿಥ್ಯಾಪವಾದಗಳನ್ನು ಹೊರಿಸುವಲ್ಲಿ ಪರಸ್ಪರ ಸ್ಪರ್ಧೆಗಿಳಿಯುತ್ತಿದ್ದರು. ಆತನ ಹೆಸರು ಯುಗಯುಗಗಳ ವರೆಗೆ ಚಿರಸ್ಥಾಯಿಯಾಗಿರುತ್ತದೆ. ಹಾಗೇ ಆತನ ಕೃತಿಗಳೂ ಕೂಡಾ."

ಎಂಗೆಲ್ಸ್‌ರು ಮಾರ್ಕ್ಸ್‌ರ ಸಮಾಧಿ ಬಳಿ ಮಾಡಿದ ಭಾಷಣದ ಈ ಮಾತಿಗಿಂತ ಹೆಚ್ಚು ಯೋಗ್ಯವಾದ, ಗೌರವ ಪೂರ್ಣವಾದ ಮತ್ತು ಘನವಾದ ಚರಮ ವಾಕ್ಯವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. "ಜೀವಂತವಿರುವ ಅತ್ಯಂತ ಮಹಾನ್ ಚಿಂತಕ ಯೋಚಿಸುವುದನ್ನು ನಿಲ್ಲಿಸಿದ' ಎಂದರು ಎಂಗೆಲ್ಸ್. ಮಾರ್ಕ್ಸ್ "ಯೋಚಿಸು"ವುದನ್ನೇನೂ ನಿಲ್ಲಿಸಲಿಲ್ಲ. ಅವರು ಯೋಚಿಸಿದರು ಮತ್ತು ತಮ್ಮ ಚಿಂತನೆಗಳನ್ನು ತಮ್ಮ ಅಸಂಖ್ಯಾತ ಕೃತಿಗಳಲ್ಲಿ ನೆಲೆಗೊಳಿಸಿ ಮಾರ್ಕ್ಸ್‌ವಾದೀ ಚಿಂತನೆ ಸರಿಯಾದ ಹಾಗೂ ವೈಜ್ಞಾನಿಕವಾದ ಏಕಮಾತ್ರ ಚಿಂತನೆಯೆಂಬ ಅದರ ಚಿರಂತನ ಸ್ವಭಾವವನ್ನು ಸ್ಥಾಪಿಸಿದರು.

ಮಾನವೀಯ ಮೌಲ್ಯಗಳಿಗೆ ಮುಡಿಪು

ಮಾರ್ಕ್ಸ್‌ವಾದಿಗಳಿಗೆ ಮಾನವೀಯ ಮೌಲ್ಯಗಳಿಲ್ಲ, ಅವರು ಹಿಂಸಾ ಪಂಥದ ಆರಾಧಕರು ಮತ್ತು ಅವರು ಯುದ್ಧಗಳನ್ನು ಸ್ವಾಗತಿಸುತ್ತಾರೆ, ಕಾರಣ ಯುದ್ಧಗಳಿಂದ ಕ್ರಾಂತಿಗಳು ಹುಟ್ಟುತ್ತವೆ ಎಂದು ಅವರು ನಂಬುತ್ತಾರೆ, ಇತ್ಯಾದಿಯಾಗಿ ಮಾರ್ಕ್ಸ್‌ವಾದಿಗಳ ಅಪನಿಂದೆ ನಡೆಯುತ್ತಿದೆ. ಈ ನಿಂದೆಗಳಲ್ಲಿ ಪ್ರತಿಯೊಂದೂ ಕಮ್ಯೂನಿಸ್ಟ್ ವಿರೋಧಿ ಬಾಡಿಗೆ ಲೇಖನಿದಾರರು, ಬಂಡವಾಳ ಶಾಹಿಗಳು, ಬಂಡವಾಳ ಶಾಹಿಗಳ ಅಳ್ವಿಕೆಯ ಪ್ರಭುತ್ವಗಳು ಮತ್ತು ಸರಕಾರಗಳು ಅಪ್ಪಣೆ ಕೊಡಿಸಿದ ಪ್ರಕಾರ ಉದ್ದೇಶ ಪೂರ್ವಕವಾಗಿ ಸೃಷ್ಟಿಸಿದ ನಿಂದೆಗಳು. ಮಾರ್ಕ್ಸ್‌ವಾದಿಗಳು ಮತ್ತು ಮಾರ್ಕ್ಸ್‌ವಾದೀ ಸಿದ್ಧಾಂತ ಯುದ್ಧ ಮತ್ತು ಹಿಂಸೆಯ ಪರಮ ಶತ್ರುಗಳು. ಈ ಬಗ್ಗೆ ಎಂದೂ ರಾಜಿ ಮಾಡಿಕೊಳ್ಳುವವರಲ್ಲ ಅವರು. ಅತ್ಯಂತ ಉನ್ನತವಾದ ಮತ್ತು ಘನವಾದ ಅರ್ಥದಲ್ಲಿ ಮಾನವೀಯತೆ ಅವರ ಸ್ಫೂರ್ತಿ. ಅನಾದಿ ಕಾಲದ ನೋವು, ಸಂಕಷ್ಟಗಳಿಂದ ಮಾನವ ವಿಮೋಚನೆಯ ಧ್ಯೇಯಕ್ಕೆ ಮಾರ್ಕ್ಸ್ ತನ್ನನ್ನು ಸಂಪೂರ್ಣವಾಗಿ ಹೇಗೆ ಅರ್ಪಿಸಿಕೊಂಡಿದ್ದರು ಎಂಬುದನ್ನು 1867 ರ ಏಪ್ರಿಲ್‌ನಲ್ಲಿ ಅವರು ಎಸ್. ಮೆಯರ್ ಎಂಬುವರಿಗೆ ಬರೆದ ಪತ್ರದ ಒಂದು ಸಣ್ಣ ಪರಿಚ್ಛೇದ ತೋರಿಸಿ ಕೊಡುತ್ತದೆ.

"ಯಾಕೆ ನಾನು ನಿಮಗೆ ಎಂದೂ ಉತ್ತರಿಸಲಿಲ್ಲ? ಯಾಕೆಂದರೆ ನಾನು ಸದಾ ಸಾವಿನ ಅಂಚಿನಲ್ಲೇ ಸುಳಿದಾಡುತ್ತಿದ್ದೆ. ಆದ್ದರಿಂದ ಯಾವ ಉದ್ದೇಶ ಸಾಧನೆಗಾಗಿ ನಾನು ನನ್ನ ಆರೋಗ್ಯ, ನನ್ನ ಸಂತೋಷ ಹಾಗು ಕುಟುಂಬವನ್ನು ತ್ಯಾಗ ಮಾಡಿದ್ದೇನೋ ಅದನ್ನು ಮುಗಿಸಲು ಸಾಧ್ಯವಾಗುವಂತೆ ಕೆಲಸ ಮಾಡಲು ನನ್ನಲ್ಲಿ ಸಾಮರ್ಥ್ಯವಿರುವ ಪ್ರತಿಯೊಂದು ಕ್ಷಣವನ್ನೂ ನಾನು ಉಪಯೋಗಿಸಬೇಕಾಗಿತ್ತು. ಈ ವಿವರಣೆಯೊಂದಿಗೆ ಹೆಚ್ಚಿನ ವಿವರವೇನೂ ಬೇಕಾಗಿಲ್ಲ ಎಂದು ನಂಬುತ್ತೇನೆ. 'ವ್ಯಾವಹಾರಿಕರು' ಎಂದನಿಸಿಕೊಳ್ಳುವ ಜನರು ಮತ್ತು ಅವರ ಜಾಣ್ಮೆಯ ಬಗ್ಗೆ ನನಗೆ ನಗು ಬರುತ್ತದೆ. ಎಮ್ಮೆಯಂತಹ ಚರ್ಮದ ಮಂದಿ ಮಾನವ ಕುಲದ ನೋವು ಸಂಕಷ್ಟಗಳ ಕಡೆಗೆ ಬೆನ್ನು ತಿರುಗಿಸಿ ತಮ್ಮ ಕೂದಲು ಕೊಂಕದಂತೆ ನೋಡಿ ಕೊಳ್ಳಬಹುದು. ಆದರೆ ನಾನು ನನ್ನ ಪುಸ್ತಕವನ್ನು ಕನಿಷ್ಟ ಹಸ್ತಪ್ರತಿಯ ಮಟ್ಟದವರೆಗಾದರೂ ಮುಗಿಸದೆ ಗೊಟಕ್ ಅಂದಿದ್ದರೆ ನನ್ನನ್ನು ನಾನು ಅವ್ಯಾವಹಾರಿಕನೆಂದು ಬಗೆಯಬೇಕಾಗುತ್ತಿತ್ತು."

ಮಾರ್ಕ್ಸ್ "ಮಾನವಕುಲದ ನೋವು ಸಂಕಷ್ಟ"ಗಳನ್ನು ವರ್ಗ ಭೇದಗಳಿಂದ ಕೂಡಿದ ಸಮಾಜ ವ್ಯವಸ್ಥೆಯ ನೋವು ಸಂಕಷ್ಟಗಳನ್ನು ಕೊನೆಗೊಳಿಸುವ ಉನ್ನತ ಧ್ಯೇಯಕ್ಕಾಗಿ ತನ್ನ ಜೀವನವನ್ನು ಮುಡಿಪಿಟ್ಟರು.

(7ನೇ ಪುಟ ನೋಡಿ)

ಹತ್ತಿ ಬೆಳೆಗಾರರಿಂದ ಬೇಡಿಕೆ ದಿನಾಚರಣೆ

ಮಲಪ್ರಭಾ ಪ್ರದೇಶ

ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಫೆಬ್ರುವರಿ 15 ಮತ್ತು 16 ರಂದು ರಾಯಚೂರಿನಲ್ಲಿ ನಡೆದ ರಾಜ್ಯ ಹತ್ತಿ ಬೆಳೆಗಾರರ ಸಮಾವೇಶವು ಕೊಟ್ಟ ಕರೆಯ ಮೇರೆಗೆ ಮಲಪ್ರಭಾ ಪ್ರದೇಶದ ಸವದತ್ತಿ, ರಾಮದುರ್ಗ ನರಗುಂದ, ನವಲಗುಂದ ತಾಲ್ಲೂಕುಗಳ ಹತ್ತಿ ಬೆಳೆಗಾರರು ಮಾರ್ಚ್ 5 ರಂದು ಬೇಡಿಕೆ ದಿನಾಚರಣೆಯನ್ನು ಆಚರಿಸಿದರು. ಕರಪತ್ರಗಳನ್ನು ಮುದ್ರಿಸಿ ಹಂಚುವುದರ ಮೂಲಕ ಕಾರ್ಯಕ್ರಮದ ಮಹತ್ವವನ್ನು ಪ್ರಚಾರ ಮಾಡಲಾಯಿತಲ್ಲದೆ ತಾಲ್ಲೂಕಾ ತಹಶೀಲದಾರರಿಗೆ ಮನವಿಗಳನ್ನು ಸಲ್ಲಿಸಲಾಯಿತು.

ಬಿಜಾಪುರ

ರಾಯಚೂರಿನಲ್ಲಿ ಹತ್ತಿ ಬೆಳೆಗಾರರ ಸಮಾವೇಶದಲ್ಲಿ ನಿರ್ಧರಿಸಿದಂತೆ ಬಿಜಾಪುರ ಜಿಲ್ಲಾ ರೈತ ಸಂಘದ ಆಶ್ರಯದಲ್ಲಿ ಫೆಬ್ರುವರಿ 5ರಂದು ನೂರಾರು ರೈತರೂ, ನಿವೇಶನ ರಹಿತರೂ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣ ಮಾಡಿ ಮನವಿಯನ್ನ ರ್ಪಿಸಿದರು. ಅರ್ಧದಷ್ಟು ಮಹಿಳೆಯರೂ ಈ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ, ಸಿ. ಬಿ. ಮಣ್ಣೂರ, ಹೊನ್ನೊಟಗಿ, ಜಕ್ರಿಯಾ ಕಾಲೇಬಾಗ, ವಿ.ಎಂ ಸೊನ್ನದ, ಚಂದ್ರಕಾಂತ ಬಿಜ್ಜರಗಿ ಮೊದಲಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ರಾಮದುರ್ಗ

ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ ಕೆಲವೊಂದು ಬೇಡಿಕೆಗಳನ್ನು ಮುಂದಿಟ್ಟು ರಾಮದುರ್ಗ ತಾಲ್ಲೂಕಿನ ರೈತರು 5-3-84 ರಂದು ಬೃಹತ್ ಮೆರವಣಿಗೆ ಹೊರಡಿಸಿ ತಹಶೀಲದಾರರಿಗೆ ಮನವಿ ಸಲ್ಲಿಸಿದರು.

ಕೆಂಬಾವುಟದ ನೇತೃತ್ವದಲ್ಲಿ ರಾಮದುರ್ಗ ನಗರದಲ್ಲಿ ನಡೆದ ಮೊಟ್ಟ ಮೊದಲನೆಯ ಮೆರವಣಿಗೆ ಇದಾಗಿತ್ತು.

ಕಳೆದ ಫೆಬ್ರವರಿ 3 ರಂದು ಮಲಪ್ರಭಾ ರೈತ ಸಮಸ್ಯೆಯ ಸಮಿತಿಯ ನಾಯಕರಿಗೆ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಯವರು ನೀಡಿದ ಆಶ್ವಾಸನೆಗಳನ್ನೂ ಕೂಡಲೇ ಕಾರ್ಯಗತ ಮಾಡುವಂತೆ ಒತ್ತಾಯಿಸಿ ಬೇಡಿಕೆ ದಿನಾಚರಣೆಯನ್ನು ಆಚರಿಸಲಾಯಿತು.

ಸರಕಾರ ಒಪ್ಪಿಕೊಂಡ ಪ್ರಕಾರ ರಾಜ್ಯ ಹತ್ತಿ ನಿಗಮವನ್ನು ಸ್ಥಾಪಿಸಿ ಹತ್ತಿ ಖರೀದಿಯನ್ನು ಮಾಡಲು ರಾಜ್ಯ ಸರಕಾರ ಮುಂದೆ ಬರಬೇಕು. ಹತ್ತಿ ದಾಸ್ತಾನಿನ ಮೇಲೆ ಮುಂಗಡ ಹಣ ಕೊಡುವ ವ್ಯವಸ್ಥೆ ಜಾರಿಗೆ ಬರಬೇಕು. ಪ್ರಾರಂಭಿಕ ಐದು ವರ್ಷಗಳ ನೀರಿನ ಕಂದಾಯ ಮನ್ನಾ ಮಾಡಿದ ಬಗ್ಗೆ ಆಜ್ಞೆ ಹೊರಡಿಸಿ ವಸೂಲಿಯನ್ನು ನಿಲ್ಲಿಸಬೇಕು. ಮುಂತಾದ ಬೇಡಿಕೆಗಳಿಗೆ ಒತ್ತಾಯಿಸಿ ಈ ಕಾರ್ಯಕ್ರಮ ನಡೆಯಿತು.

ಪ್ರಾಂತ ರೈತ ಸಂಘದ ರಾಮದುರ್ಗ ತಾಲ್ಲೂಕ ಘಟಕದ ಸಂಚಾಲಕ ವಿ. ಪಿ. ಕುಲಕರ್ಣಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಮುಳ್ಳೂರು, ಮುದೇನಕೊಪ್ಪ ಕಲ್ಲೂರು, ಲಿಖನಾಯಕನಕೊಪ್ಪ ಮತ್ತು ಕಡ್ಲಿಕೊಪ್ಪ ಮುಂತಾದ ಗ್ರಾಮಗಳ ರೈತರು ಪಾಲ್ಗೊಂಡಿದ್ದರು.

ಹತ್ತಿ ಬೆಳೆಗಾರರ ಮುಖ್ಯ ಬೇಡಿಕೆಗಳು

* ಸರಕಾರ ಆಶ್ವಾಸನೆ ಕೊಟ್ಟ ಪ್ರಕಾರ ಹತ್ತಿ ದಾಸ್ತಾನಿನ ಮೇಲೆ ಮುಂಗಡ ಹಣ ಕೊಡುವ ವ್ಯವಸ್ಥೆ ಕೂಡಲೇ ಜಾರಿಗೆ ಬರಬೇಕು.
* ಭಾರತ ಹತ್ತಿ ನಿಗಮವು ಖರೀದಿ ಮಾಡಿದ ಹತ್ತಿಗೆ ಕೂಡಲೇ ಹಣ ಸಂದಾಯ ಮಾಡಬೇಕು.
* ಒಮ್ಮೆ ಖರೀದಿಯಾದ ಹತ್ತಿಯನ್ನು ನಿರಾಕರಿಸುವುದಾಗಲಿ ಕಡಿಮೆ ದರಕ್ಕೆ ಕೊಡುವುದಾಗಲಿ ನಿಲ್ಲಬೇಕು.
* ಖಾಸಗಿ ಖರೀದಿದಾರರು ಹತ್ತಿ ಖರೀದಿ ಮಾಡಿದ ಒಂದು ವಾರದೊಳಗೆ ರೈತರಿಗೆ ಹಣ ಸಂದಾಯ ಮಾಡಬೇಕು.
* ಸರ್ಕಾರ ಒಪ್ಪಿಕೊಂಡ ಪ್ರಕಾರ ರಾಜ್ಯ ಹತ್ತಿ ನಿಗಮವನ್ನು ಸ್ಥಾಪಿಸಿ ಹತ್ತಿ ಖರೀದಿಯನ್ನು ಮಾಡಲು ರಾಜ್ಯ ಸರ್ಕಾರ ಮುಂದೆ ಬರಬೇಕು.
* ಮಲಪ್ರಭಾ ಅಚ್ಚು ಕಟ್ಟು ಪ್ರದೇಶವನ್ನು ಹತ್ತಿ ಬೆಳೆಗೆ ಮೀಸಲಿಟ್ಟು ಹೆಚ್ಚು ಹತ್ತಿ ಬೆಳೆಯಲು ಪ್ರೋತ್ಸಾಹಿಸಬೇಕು.
* ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಂತೆ ಪ್ರಾರಂಭಿಕ ಐದು ವರ್ಷಗಳ ನೀರಿನ ಕಂದಾಯ ಮನ್ನಾ ಮಾಡಿದ ಬಗ್ಗೆ ಆಜ್ಞೆ ಹೊರಡಿಸಿ ವಸೂಲಿಯನ್ನು ನಿಲ್ಲಿಸಬೇಕು. ಇತ್ಯಾದಿ.

(3ನೇ ಪುಟದಿಂದ)

1939 ರಿಂದ 1943 ರವರೆಗೆ ಕುರುಣೆ ಮತ್ತು ನಾನು ಪ್ರತಿಯೊಂದು ಹೋರಾಟ, ಚಳುವಳಿಗಳಲ್ಲಿ ಸಹಭಾಗಿಗಳಾಗಿಯೇ ದುಡಿದಿದ್ದೆವು. ಬಲಿಷ್ಠವಾದ ಶರೀರ. ಕೆಂಪು ಬಣ್ಣ. ದಣಿವಿಲ್ಲದೆ ದುಡಿಯುವ ಛಲಗಳಿಗಾಗಿ ಪಾರ್ಟಿ ಕಾಮ್ರೇಡ್ಸರೆಲ್ಲ ಅವರನ್ನು ಪ್ರೀತಿಯಿಂದ "ಪಠಾಣ" ಎಂದು ಸಂಭೋಧಿಸುತ್ತಿದ್ದೆವು. 1948 ರಲ್ಲಿ ನಾಸಿಕದಲ್ಲಿ 2 ವರ್ಷ, 1950 ರಲ್ಲಿ ಯರವಾಡ ಜೈಲಿನಲ್ಲಿ ಒಂದೂವರೆ ವರ್ಷ ನಾವು ಒಟ್ಟಿಗೆ ಜೈಲುವಾಸದಲ್ಲಿದ್ದೆವು. ನಾಟಕಗಳಲ್ಲಿ ನಾವಿಬ್ಬರೂ ಪಾತ್ರಧಾರಿಗಳಾಗಿಯೂ, ಆಟಗಳಲ್ಲಿ ನಾವಿಬ್ಬರೂ ಒಬ್ಬರನ್ನೊಬ್ಬರು ಎದುರಿಸಿಯೂ, ಒಂದು ಸಲ ಅವರು ಗೆಲ್ಲುವುದರಲ್ಲೂ, ಒಂದು ಸಲ ನಾನು ಗೆಲ್ಲುವುದರಲ್ಲೂ ಸಮಾಧಾನ ಪಡುತ್ತಿದ್ದೆವು.

ಕುರುಣೆಯವರ ಅಗಲುವಿಕೆಯಿಂದಾಗಿ ಮಹಾರಾಷ್ಟ್ರದ ಕಾರ್ಮಿಕರ ರೈತರ ಚಳುವಳಿಗೆ, ಎಡ ಮತ್ತು ಪ್ರಜಾಪ್ರಭುತ್ವ ಹೋರಾಟಕ್ಕೆ ತುಂಬಲಾರದ ಹಾನಿಯಾಗಿದೆ. ನನಗೆ ಒಬ್ಬ ಉತ್ತಮ ಸಂಗಾತಿಯನ್ನು ಕಳೆದು ಕೊಂಡಂತಾಗಿದೆ. ಹೋದ ಏಪ್ರಿಲ್ ತಿಂಗಳಲ್ಲಿ ನಡೆದ ಸಿಐಟಿಯು ಸಮ್ಮೇಳನ ಮುಗಿಸಿ ನಾವಿಬ್ಬರೂ ಜೊತೆಯಾಗಿಯೇ ಮುಂಬಯಿ ತನಕ ಪ್ರಯಾಣ ಮಾಡಿದಾಗ ಹಳೇಕಾಲದಲ್ಲಿದ್ದ ಪಾರ್ಟಿಯೊಳಗಿನ ಶಿಸ್ತು, ಪಾರ್ಟಿ ಸದಸ್ಯರಲ್ಲಿದ್ದ ತ್ಯಾಗ, ಬಲಿದಾನದ ಹಾಗೆಯೇ ಕಷ್ಟ ಜೀವನದ ನೆನಪು ಮಾಡಿ ಕೊಂಡಿದ್ದೆವು. ಈಗಿನ ಪೀಳಿಗೆಯಲ್ಲಿ ಅದರ ಅಭಾವವನ್ನು ಅವರು ಒತ್ತಿ ಹೇಳಿರುವುದು ಎಲ್ಲರೂ ನೆನಸಿಕೊಳ್ಳತಕ್ಕ ವಿಷಯ.

— ಎನ್. ಕೆ. ಉಪಾಧ್ಯಾಯ

ಅಧ್ಯಾಪಕರ ಮೇಲೆ ಹಲ್ಲೆ ; ಎಸ್.ಎಫ್.ಐ. ಪ್ರತಿಭಟನೆ

ಬೆಳ್ತಂಗಡಿ ಜ್ಯೂನಿಯರ್ ಕಾಲೇಜಿನ ಅಧ್ಯಾಪಕರಾದ ಶ್ರೀ. ಕೃಷ್ಣಪ್ಪ ಕೋಟ್ಯಾನ್ ಅವರಿಗೆ ಅವರ ಮನೆಯ ಬಳಿ ವಾಸಿಸುವ ಊರಿನ ಕುಪ್ರಸಿದ್ಧ ಕೇಡಿ ರವಿ ಕೋಟ್ಯಾನ್ ಎಂಬುವವನು ಆಗಾಗ ಕಿರುಕುಳ ಕೊಟ್ಟು ಅವರ ಆಸ್ತಿಯನ್ನು ಕಬಳಿಸಲು ಪ್ರಯತ್ನಿಸಿರುವುದನ್ನು ಅಧ್ಯಾಪಕರು ಪ್ರತಿಭಟಿಸಿದಾಗ ಕೇಡಿಯು ಅವರ ಮೇಲೆ, ಪತ್ನಿ, ಮಕ್ಕಳ ಮೇಲೆ ಗೂಂಡಾಗಳ ನೆರವಿನಿಂದ ಹಲ್ಲೆ ನಡೆಸಿದ್ದಾನೆ. ಪೋಲೀಸರು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳದಿದ್ದಾಗ ಜ್ಯೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ಎಸ್. ಎಫ್. ಐ. ನೇತೃತ್ವದಲ್ಲಿ ಎರಡು ದಿನಗಳ ಕಾಲ ಮುಷ್ಕರ ನಡೆಸಿದರು. ಇದನ್ನು ಕಂಡ ಆ ಕೇಡಿಯು ವಿದ್ಯಾರ್ಥಿಗಳ ಮೇಲೆಯೂ ಹಲ್ಲೆ ನಡೆಸಿ ಸುಳ್ಳು ಕೇಸುಗಳನ್ನು ದಾಖಲು ಮಾಡಿದ್ದಾನೆ. ಪೋಲೀಸರು ಹಲ್ಲೆ ನಡೆಸಿದವರ ಮೇಲೆ ಕ್ರಮ ಕೈಗೊಳ್ಳದೆ ಅಧ್ಯಾಪಕರ" ವಿಧ್ಯಾರ್ಥಿಗಳ ಮೇಲ್ಲೆ ಕೇಸನ್ನು ಹಾಕಿದ್ದಾರೆ. ಈ ಕೇಸನ್ನು ಹಿಂತೆಗೆದುಗೊಂಡು ಅಪರಾಧಿ ಮತ್ತು ಗೂಂಡಾಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಎಸ್. ಎಫ್. ಐ. ನ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಒತ್ತಾಯಿಸಿದೆ.

"ಕಾಡಾ" ಚೇರ್‌ಮನ್ನರಿಗೆ ರೈತರ ಮನವಿ

ಮಲಪ್ರಭಾ-ಘಟಪ್ರಭಾ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಚೇರಮನ್ನರಾಗಿ ನೇಮಕ ಗೊಂಡ ಮಲಪ್ರಭಾ ರೈತ ಸಮನ್ವಯ ಸಮಿತಿ ಸಂಚಾಲಕರಲ್ಲಿ ಒಬ್ಬರಾದ ನರಗುಂದದ ಶಾಸಕ ಶ್ರೀ ಬಿ. ಆರ್. ಯಾವಗಲ್ಲರನ್ನು 4-3-84 ರಂದು ಸವದತ್ತಿಯಲ್ಲಿ ಸತ್ಕರಿಸಿ ಮಲಪ್ರಭಾ ಅಚ್ಚು ಕಟ್ಟು ಪ್ರದೇಶದ ರೈತರ ಬೇಡಿಕೆಗಳನ್ನೊಳಗೊಂಡ ಮನವಿಯೊಂದನ್ನು ಸಲ್ಲಿಸಲಾಯಿತು.

1980 ರ ಮಲಪ್ರಭಾ ರೈತ ಹೋರಾಟದ ಮುಂಚೂಣಿಯಲ್ಲಿದ್ದ ಶ್ರೀ ಯಾವಗಲ್ಲರು ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಶಕ್ತಿಮೀರಿ ಶ್ರಮಿಸುವುದಾಗಿ ಹೇಳಿದರು. ನರಗುಂದ, ನವಲಗುಂದ, ಸವದತ್ತಿ ರಾಮದುರ್ಗ ಮತ್ತು ಬೈಲಹೊಂಗಲ ತಾಲ್ಲೂಕುಗಳ ರೈತರು ಸಭೆಯಲ್ಲಿ ಪಾಲುಗೊಂಡಿದ್ದರು. ಸವದತ್ತಿ ತಾಲ್ಲೂಕಾ ಜನತಾ ಪಕ್ಷದ ಅಧ್ಯಕ್ಷ ಡಾ|| ಎಲ್. ಬಿ. ಶಿಗ್ಲಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು ಸಮನ್ವಯ ಸಮಿತಿಯ ಸಂಚಾಲಕರಾದ ಸರ್ವಶ್ರೀ ಎಸ್. ಎಂ. ಬಾಳಿಕಾಯಿ, ಬಿ. ಬಿ. ಗಾಣಿಗೇರ, ಬಸಪ್ಪ ಸಾಲುಟಗಿ, ಶಿವದೇವಗೌಡ ಪಾಟೀಲ, ಬಸವರಾಜ ಪಟ್ಟೇದ್, ಎಂ. ಸಿ. ಪಟ್ಟಣ, ಎಸ್. ಎಚ್. ಕಪ್ಪಣ್ಣವರ, ರೈತರ ಸಮಸ್ಯೆಗಳನ್ನು ಕುರಿತು ಮಾತನಾಡಿದರು. ಶ್ರೀ ಜಿ. ಬಿ. ತೊರಗಲ್ ಇವರು ಮನವಿ ಪತ್ರ ಓದಿದರು. ಬಾಬಣ್ಣ ಹಂಪಣ್ಣವರ ಶ್ರೀ ಯಾವಗಲ್ಲರಿಗೆ ಶಾಲುಹೊದಿಸಿ ಸತ್ಕರಿಸಿದರು. ಆರಂಭದಲ್ಲಿ ನಿತ್ಯಾನಂದಜಿ ಸ್ವಾಗತಿಸಿದರು.

ರಾಮದುರ್ಗದಲ್ಲಿ ರೈತರ ಉಪವಾಸ ಸತ್ಯಾಗ್ರಹ

ತಮ್ಮ ಜಮೀನುಗಳಿಗೆ ಹೋಗಲು ಇರುವ ದಾರಿ ಹಾಳಾದನ್ನು ದುರಸ್ತಿ ಮಾಡಲು ಒತ್ತಾಯಿಸಿ ರಾಮದುರ್ಗ ತಾಲೂಕಿನ ಕಡ್ಲಿಕೊಪ್ಪ, ಮುಂದೇನಕೊಪ್ಪ, ಮುಳೇರು ಗ್ರಾಮದ ರೈತರು 5-3-84 ರಿಂದ ತಹಶೀಲದಾರ್ ಕಛೇರಿ ಎದುರು ಸರದಿ ಅನ್ನ ಸತ್ಯಾಗ್ರಹ ಶುರು ಮಾಡಿದ್ದಾರೆ.

ಸತ್ಯಾಗ್ರಹದ ಆರಂಭದಲ್ಲಿ ಕಡ್ಲಿಕೊಪ್ಪ ಗ್ರಾಮದ ರೈತರು ರಾಮದುರ್ಗ ನಗರದಲ್ಲಿ ಕೆಂಬಾವುಟ ಹಿಡಿದು, ಘೋಷಣೆ ಕೂಗುತ್ತಾ ಭಾರೀ ಮೆರವಣಿಗೆ ನಡೆಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಮದುರ್ಗ ತಾಲ್ಲೂಕು ಘಟಕದ ಸಂಚಾಲಕ ವಿ. ಪಿ. ಕುಲಕರ್ಣಿ, ಮುದೇನಕೊಪ್ಪದ ಸಿ.ಎನ್. ಪಾಟೀಲ, ಕಡ್ಲಿಕೊಪ್ಪ ಗ್ರಾಮದ ಕುಬೇರಗೌಡ ಪಾಟೀಲ ಮತ್ತಿತರರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕ ಸಲ ವಿನಂತಿಸಿದ್ದರೂ ಈ ಬಗ್ಗೆ ಕ್ರಮ ವಹಿಸದಿರುವದರ ಕುರಿತು ಅಧಿಕಾರಿಗಳನ್ನು ವಿ.ಪಿ. ಕುಲಕರ್ಣಿ ಅವರು ತೀವ್ರವಾಗಿ ಖಂಡಿಸಿ ಚಳುವಳಿಯನ್ನು ತೀವ್ರಗೊಳಿಸುವ ಎಚ್ಚರಿಕೆ ನೀಡಿದರು.

ಪ್ರಾಂತ ರೈತ ಸಂಘದ ಬೆಳಗಾಂ ಜಿಲ್ಲಾ ಸಮಿತಿ ಕಾರ್ಯದರ್ಶಿ ನಿತ್ಯಾನಂದಜಿ ಅವರು ಆಗಮಿಸಿ ಹೋರಾಟವನ್ನು ಬೆಂಬಲಿಸಿದರು.

ಶ್ರೀ ಯಾವಗಲ್ಲರಿಗೆ ಸತ್ಕಾರ

ರಾಮದುರ್ಗ ತಾಲೂಕಿನ ಮುದೇನಕೊಪ್ಪ ಗ್ರಾಮದಲ್ಲಿ 10-3-84 ರಂದು ಇತ್ತೀಚಿಗೆ ಮಲಪ್ರಭಾ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಕಾಡಾ) ದ ಚೇರಮನ್‌ರಾಗಿ ನೇಮಕಗೊಂಡ ಶ್ರೀ ಬಿ. ಆರ್. ಯಾವಗಲ್ಲ ಅವರಿಗೆ ಕರ್ನಾಟಕ ಪ್ರಾಂತ ರೈತ ಸಂಘದ ರಾಮದುರ್ಗ ತಾಲೂಕು ಘಟಕದ ಆಶ್ರಯದಲ್ಲಿ ಸತ್ಕಾರ ಸಮಾರಂಭ ನಡೆಯಿತೆಂದು ವರದಿಯಾಗಿದೆ.

ದ. ಕ. ಆಟೋ ಚಾಲಕರ ಸಭೆ

ದ. ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘದ 6 ನೇ ವಾರ್ಷಿಕ ಮಹಾಸಭೆಯು ಶಾಸಕರಾದ ಪಿ. ರಾಮಚಂದ್ರರಾವ್ ಇವರ ಅಧ್ಯಕ್ಷತೆಯಲ್ಲಿ ಮಾರ್ಚ್ 10 ರಂದು ಜರುಗಿತು.

ಬೆಂಗಳೂರು ರಿಕ್ಷಾ ಚಾಲಕರ ಪ್ರಧಾನ ಕಾರ್ಯದರ್ಶಿಗಳಾದ ರಮೇಶ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಚಾಲಕರು ಎದುರಿಸುತ್ತಿರುವ ಸಮಸ್ಯೆಯನ್ನು ಬಗೆಹರಿಸಿ ಬೇಡಿಕೆ ಪಡೆಯ ಬೇಕಾದರೆ ರಾಜ್ಯ ಮಟ್ಟದಲ್ಲಿ ಆಟೋ ಚಾಲಕರು ಒಂದಾಗಿ ಹೋರಾಟ ಮಾಡಬೇಕೆಂದು ಕರೆ ನೀಡಿದರು.

ಮುಂದಿನ ವರ್ಷದ ಕಾರ್ಯಕಾರಿ ಸಮಿತಿಗೆ ಶಾಸಕರಾದ ಪಿ. ರಾಮಚಂದ್ರರಾವ್ ಅಧ್ಯಕ್ಷರಾಗಿಯು, ಪಿ. ಸುರೇಶ್‌ಮಲ್ಯ. ಪಹಿಲ್ವಾರ್ ಬಾಬಣ್ಣ ಉಪಾಧ್ಯಕ್ಷರಾಗಿಯೂ ಕೆ. ಅಬೂಬಕ್ಕರ್ ಪ್ರಧಾನ ಕಾರ್ಯದರ್ಶಿಗಳಾಗಿಯೂ ಮತ್ತು ನಾಥಿರಾಜ್ ಕಡಂಬ, ನಾರಾಯಣಗಾಯರ್ ಜೊತೆ ಕಾರ್ಯದರ್ಶಿಗಳಾಗಿಯೂ, ಶೇಕರ್ ಕೋಶಾಧಿಕಾರಿಗಳಾಗಿಯೂ ಮತ್ತು 14 ಜನ ಕಾರ್ಯಕಾರಿಸಮಿತಿಯ ಸದಸ್ಯರನ್ನು ಚುನಾಯಿಸಲಾಯಿತು.

ರಿಕ್ಷಾದಲ್ಲಿ ಮೂವರು ಪ್ರಯಾಣಿಕರ ಕುಳಿತು ಕೊಳ್ಳುವ ಸರಕಾರದ ತೀರ್ಮಾನವನ್ನು ವಿರೋಧಿಸಲು, ದ.ಕ. ಜಿಲ್ಲೆಗೆ ಪ್ರತ್ಯೇಕ ಮೀಟರ್ ದರ ಕೇಳಬೇಕೆಂದೂ ಈ ಬಗ್ಗೆ ಸರ್ಕಾರಕ್ಕೆ 15 ದಿನಗಳ ನೋಟೀಸು ಕೊಡಬೇಕೆಂದು ಸರ್ಕಾರ ಈಬಗ್ಗೆ ತೀರ್ಮಾನ ಕೊಡದಿದ್ದರೆ ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಎಲ್ ಸಾಲ್ವಡೋರ್ - ಮಿಲಿಟರಿಯ ಹತಾಷ ಪ್ರತಿಕ್ರಿಯೆ

ಎಲ್ ಸಾಲ್ವಡೋರ್‌ನಿಂದ ಬರುತ್ತಿರುವ ವರದಿಗಳು ಹೊಸ ವರ್ಷದಂದು ಗೆರಿಲ್ಲಾಗಳು ಪ್ರಾರಂಭಿಸಿದ ಧಾಳಿಯು ಬಲಗೊಳ್ಳುತ್ತಿರುವುದನ್ನು ಸೂಚಿಸುತ್ತವೆ. ಫರಬುಂಡೋ ಮಾರ್ತಿ ರಾಷ್ಟ್ರೀಯ ವಿಮೋಚನಾ ರಂಗವು ಸುಮಾರಾಗಿ ದೇಶದ ಮೂರನೇ ಒಂದು ಭಾಗದ ಮೇಲೆ ಹತೋಟಿ ಪಡೆದಿದೆ. ಅಲ್ಲದೆ ಗೆರಿಲ್ಲಾ ಪಡೆಗಳು ಆರ್ಥಿಕವಾಗಿ ಅತ್ಯಂತ ಪ್ರಮುಖವಾದ ಪ್ರದೇಶದಲ್ಲಿರುವ ಹಲವಾರು ನಗರಗಳೆಡೆಗೆ ಮುನ್ನಡೆದಿದ್ದಾರೆ ಎಂದು ಪ್ರಮುಖ ಪತ್ರಿಕೆಗಳು ವರದಿ ಮಾಡಿವೆ.

ಹೊಸ ವರ್ಷದ ಕಾಣಿಕೆ

ಕಳೆದ ನಾಲ್ಕು ವರ್ಷಗಳಲ್ಲೇ ಅತ್ಯಂತ ತೀವ್ರವಾದ ಧಾಳಿಯನ್ನು ಗೆರಿಲ್ಲಾಗಳು ನಡೆಸಿದ್ದು ಮಿಲಿಟರಿ ಆಡಳಿತವು ದಿಗ್ಭ್ರಮೆಗೊಂಡಿದೆ. ಹೊಸ ವರ್ಷದ ಪ್ರಾರಂಭಕ್ಕೆ ಕೇವಲ 20 ಗಂಟೆಗಳಿದ್ದವು. ಹಂಗಾಮಿ ಅಧ್ಯಕ್ಷರು ಮತ್ತು ಬಲಪಂಥೀಯ ನಾಯಕರುಗಳು ಹೊಸ ವರ್ಷದ ಆಚರಣೆಯ ಸಂಭ್ರಮದಲ್ಲಿರುವಾಗಲೇ ಸಾನ್ ಸಾಲ್ವಡೋರ್‌ನಿಂದ ಕೇವಲ 4 ಕಿ. ಮಿ. ದೂರದಲ್ಲಿರುವ ಎಲ್ ಪಾರೈಸೊ ಕೋಟೆಯ ಮೇಲೆ ಗೆರಿಲ್ಲಾಗಳ ಧಾಳಿಯ ಸುದ್ದಿ ಮುಟ್ಟಿತು. ಅಮೇರಿಕನ್ ಎಂಜಿನಿಯರುಗಳು ವಿನ್ಯಾಸ ತಯಾರು ಮಾಡಿ ಕಟ್ಟಿದ ಈ ಕೋಟೆಯನ್ನು ಅಭೇದ್ಯವೆಂದು ಕೊಂಡಿದ್ದರು. ಗೆರಿಲ್ಲಾ ವಿರೋಧಿ ಸಮರದಲ್ಲಿ ತಜ್ಞರೆನಿಸಿದ ಅಮೇರಿಕನ್‌ರ ಪ್ರಕಾರ ಈ ಕೋಟೆಯ ಮೇಲೆ ಹಠಾತ್ ಧಾಳಿ ಅಸಾಧ್ಯವಾಗಿತ್ತು.

ಡಿಸೆಂಬರ್ 30,ರ ರಾತ್ರಿ ನಾಲ್ಕನೇ ಕಾಲ್ದಳದ ತುಕಡಿ ಮತ್ತು 2000 ಸೈನಿಕರಿದ್ದ ಎಲ್ ಪಾರೈಸೊ ಗೆರಿಲ್ಲಾಗಳ ತೀವ್ರ ಧಾಳಿಗೆ ತುತ್ತಾಗಿ ಕೇವಲ ಎರಡು ಗಂಟೆಗಳಲ್ಲಿ ಪ್ರತಿರೋಧವಿಲ್ಲದೆ ಸ್ತಬ್ಧವಾಯಿತು. ನಂತರ ಅಮೇರಿಕದ ಗ್ರೀನ್ ಬೆರೆಟ್ಸ್ ನವರಿಂದ ತರಬೇತಿ ಪಡೆದ 400 ಸೈನಿಕರನ್ನು ಕರೆ ತಂದರೂ 14 ಘಂಟೆಗಳಿಗೂ ಮಿಕ್ಕಿ ಗೆರಿಲ್ಲಾಗಳು ಹೋರಾಡಿ ನಂತರ ಹಿಂದೆ ಸರಿದರು. ಈ ಧಾಳಿಯಲ್ಲಿ 300 ಸೈನಿಕರನ್ನು ಕೊಂದು 200 ಸೈನಿಕರನ್ನು ಸೆರೆ ಹಿಡಿಯಲಾಯಿತು. ಅಲ್ಲದೆ ಕೋಟೆಯನ್ನು ಬಿಡುವಾಗ ಗೆರಿಲ್ಲಾಗಳು ಅಪಾರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ತರಲಾಗದ ಶಸ್ತ್ರಾಸ್ತ್ರಗಳನ್ನು ನಾಶ ಮಾಡಿದ್ದಾರೆ.

ಸೇತುವೆಯ ಧ್ವಂಸ

ಎಲ್ ಪಾರೈಸೊನಲ್ಲಿ ಗುಂಡಿನ ಧಾಳಿ ಕೊನೆಗೊಳ್ಳುತ್ತಿದ್ದಂತೆ ಜನವರಿ 1 ರಂದು ಲೆಂಪ ನದಿಯ ಮೇಲೆ ಕಟ್ಟಲಾಗಿದ್ದ ಅರ್ಧ ಮೈಲಿ ಉದ್ದದ ಸೇತುವೆಯನ್ನು ಉಡಾಯಿಸಿದರು. ದೇಶದ ಮಧ್ಯದಲ್ಲಿದ್ದ ಈ ಸೇತುವೆ ಅತ್ಯಂತ ರಕ್ಷಿತ ಪ್ರದೇಶವಾಗಿತ್ತು. 1981 ರಲ್ಲಿ ಈ ನದಿಯ ಮೇಲಿನ ಗೋಲ್ಡನ್ ಸೇತುವೆಯನ್ನು ನಾಶ ಮಾಡಿದ ಮೇಲೆ ಇದೊಂದೆ ಸಾಗಾಣಿಕೆಯೋಗ್ಯ ಸೇತುವೆಯಾಗಿತ್ತು. ಈ ನದಿಯ ಮೇಲಿನ ರೈಲ್ವೇ ಸೇತುವೆಯನ್ನೂ ಗೆರಿಲ್ಲಾಗಳು ನಾಶ ಮಾಡಿದ್ದಾರೆ.

ಗೆರಿಲ್ಲಾ ಚಳುವಳಿಯನ್ನೆ ನಾಶ ಮಾಡುತ್ತೇವೆಂದು ಸಾರ್ವಜನಿಕವಾಗಿ ಘೋಷಿಸಿ 20,000 ಸೈನಿಕರನ್ನು ಕಾರ್ಯಾಚರಣೆಗೆ ಇಳಿಸಿದ ಸಮಯದಲ್ಲೇ ಮಿಲಿಟರಿಯು ಈ ಭಾರಿ ಧಾಳಿಯನ್ನು ಎದುರಿಸಬೇಕಾಯಿತು.

ಗೆರಿಲ್ಲಾಗಳ ಈ ವರ್ಣರಂಜಿತ ಯಶಸ್ಸನ್ನು ಮುರಿಯಲು ಮಿಲಿಟರಿಯು ಗೆರಿಲ್ಲಾಗಳ ವಿರುದ್ಧ ತೀವ್ರ ಕಾರ್ಯಾಚರಣೆಯಲ್ಲಿ ತೊಡಗಿದ್ದು ಶಾಂತಿಯುತವಾದ ಪಟ್ಟಣ ಮತ್ತು ಹಳ್ಳಿಗಳ ಮೇಲೂ ಬಾಂಬುಗಳನ್ನು ಸುರಿಯುತ್ತಿದೆ.

ನಿರಾಸೆ ಕಾದಿದೆ

ಆದರೆ ಮಿಲಿಟರಿಗೆ ತನ್ನ ಹೊಸ ಕಾರ್ಯಾಚರಣೆಯಲ್ಲಿ ಯಾವುದೇ ಯಶಸ್ಸು ಸಿಗುವಂತಿಲ್ಲ. ಎಲ್ ಪಾರೈಸೊ ಮತ್ತು ಲೆಂಪಾ ನದಿಯ ಮೇಲಿನ ಗೆರಿಲ್ಲಾಗಳ ಧಾಳಿಯಿಂದಾಗಿ ಸರ್ಕಾರಿ ಸೈನ್ಯದ ಹೋರಾಟದ ಸಾಧ್ಯತೆಗಳ ಬಗ್ಗೆ ಮಿಲಿಟರಿ ಆಡಳಿತಕ್ಕೆ ಶಂಕೆ ಪ್ರಾರಂಭವಾಗಿದೆ. ಸೈನ್ಯದ ಮನಸ್ಥೈರ್ಯವನ್ನು ಕಾಪಾಡುವುದು ಹೇಗೆಂದು ಆಡಳಿತಕ್ಕೆ ತಲೆ ನೋವಾಗಿದೆ.

ಅಮೇರಿಕನ್ ಪರವಾದ ಮಿಲಿಟರಿ ಆಡಳಿತವು ಪ್ರತಿ ಧಾಳಿಯ ಕ್ರಮಗಳನ್ನು ತೆಗೆದುಕೊಂಡಿರುವುದನ್ನು ನೋಡಿದರೆ ಇತ್ತೀಚಿನ ಘಟನೆಗಳಿಂದ ಅದು ರಾಜಕೀಯ ಅಥವಾ ಮಿಲಿಟರಿ ಪಾಠವನ್ನು ಕಲಿತಂತೆ ಕಾಣುವುದಿಲ್ಲ. ವಿಮೋಚನಾ ರಂಗವು ಮುಂದಿಟ್ಟಿರುವ ಎಲ್ಲ ಸೂಚನೆಗಳನ್ನೂ ತಿರಸ್ಕರಿಸುತ್ತಿದೆ. ಈ ಸೂಚನೆಗಳು ರಚನಾತ್ಮಕವಾಗಿವೆ; ರಕ್ತಪಾತವನ್ನು ನಿಲ್ಲಿಸಿ, ದೇಶದ ಬಿಕ್ಕಟ್ಟನ್ನು ಕುರಿತಂತೆ ರಾಷ್ಟ್ರವ್ಯಾಪಿ ಚರ್ಚೆಯನ್ನು ಬೆಳಸಿ, ಹೋರಾಟದಲ್ಲಿ ತೊಡಗಿರುವ ಎಲ್ಲರ ನಡುವೆ ಚರ್ಚೆ ಮತ್ತು ಎಲ್ಲರಿಗೂ ರಕ್ಷಣೆ ಕೊಡುವುದರೊಂದಿಗೆ ಚುನಾವಣೆಗಳನ್ನು ನಡೆಸುವುದು.

ಮಾನವ ಹಕ್ಕುಗಳ ಉಲ್ಲಂಘನೆ

ಆದರೆ ರೇಗನ್ ಆಡಳಿತ ಸೈನ್ಯವು ನಡೆಸುತ್ತಿರುವ ಅಮಾನುಷ ಕೃತ್ಯಗಳಿಗೆ ಕುರುಡಾಗಿದೆ ಮಾನವ ಹಕ್ಕುಗಳ ಉಲ್ಲಂಘನೆಗಾಗಿ ರೇಗನ್ ಆಡಳಿತ ತನ್ನ ದೇಶದಲ್ಲೇ ಈ ಬಗ್ಗೆ ತೀವ್ರವಾದ ವಿರೋಧವನ್ನು ಎದುರಿಸುತ್ತಿದೆ.

ಮಾನವ ಹಕ್ಕುಗಳ ಉಲ್ಲಂಘನೆಗಾಗಿ ಎಲ್ ಸಾಲ್ವಡೊರ್‌ಗೆ ಮಿಲಿಟರಿ ಸರಬರಾಜು ಖೋತಾ ಆಗುತ್ತದೆಂಬ ಆತಂಕವಿಲ್ಲ. ರೇಗನ್ ಆಡಳಿತ ಮಿಲಿಟರಿ ನೆರವನ್ನು ಈ ವರ್ಷ 400 ಮಿಲಿಯನ್ ಡಾಲರ್‌ಗಳಿಗೆ ಏರಿಸಿದೆ. ಇದು ಕಳೆದ ವರ್ಷಕ್ಕಿಂತ ಆರುಪಟ್ಟು ಹೆಚ್ಚಾಗಿದೆ.

ಉತ್ತರಿಸದ ಪ್ರಶ್ನೆಗಳು

ಹೊಸ ಚುನಾವಣೆಯ ನಾಟಕವನ್ನು ಆಡಲಾಗುತ್ತಿದೆ ಈ ಚುನಾವಣೆಗಳ ಉದ್ದೇಶ ದಬ್ಬಾಳಿಕೆಯ ಆಡಳಿತವನ್ನು ಕಾನೂನು ಬದ್ಧಗೊಳಿಸುವುದು ಬಲ ಪಂಥೀಯ ಹಾಗು ಉಗ್ರ ಬಲ ಪಂಥೀಯರು ತಮ್ಮ ಅಭ್ಯರ್ಥಿಗಳನ್ನು ಘೋಷಿಸಿದ್ದು ಒಬ್ಬರು ಇನ್ನೊಬ್ಬರನ್ನು ಟೀಕಿಸುತ್ತಿದ್ದಾರೆ ಆದರೆ ಈ ಚುನಾವಣೆಯ ನಾಟಕದಲ್ಲಿ ರಾಷ್ಟ್ರೀಯ ವಿಮೋಚನಾ ರಂಗ ಮತ್ತು ಕ್ರಾಂತಿಕಾರಿ ಪ್ರಜಾ ಸತ್ತಾತ್ಮಕ ರಂಗ ಭಾಗವಹಿಸುತ್ತಿಲ್ಲ. ಎಡ ಶಕ್ತಿಗಳು ಚುನಾವಣೆಗಳಲ್ಲಿ ಭಾಗವಹಿಸದಿರುವುದನ್ನು ಉದ್ದಗಿಸಿ ಹೆಚ್ಚು ಮಿಲಿಟರಿ ನೆರವನ್ನು ಎಲ್ ಸಾಲ್ವಡೋರ್ ನೀಡಲು ರೇಗನ್ ಆಡಳಿತ ಪ್ರಯತ್ನಿಸುತ್ತಿದೆ. ಒಂದು ವೇಳೆ ಈ ಚುನಾವಣೆಯ ತಂತ್ರ ಯಶಸ್ವಿಯಾಗದಿದ್ದರೆ ಮತ್ತು ಮಿಲಿಟರಿ ಆಡಳಿತ ದಿನೇ ದಿನೇ ಕುಸಿದರೆ ಕೊನೆಗೆ ಮಿಲಿಟರಿ ಶಕ್ತಿಗೆ ಶರಣಾಗುವುದೆಂದು ಅಮೇರಿಕ ನಿರ್ಧರಿಸಿದೆ. ಈ ತಂತ್ರ ಗ್ರೆನೆಡಾದಲ್ಲಿ ಸಫಲವಾಗಿರುವುದು ಅಮೇರಿಕಕ್ಕೆ ಆತ್ಮ ವಿಶ್ವಾಸ ಹೆಚ್ಚಿಸಿದೆ.

ಗ್ರೆನೆಡಾದಂತೆ ಎಲ್ ಸಾಲ್ವಡೋರ್‌ನಲ್ಲಿ ನೇರವಾದ ಮಿಲಿಟರಿ ಹಸ್ತಕ್ಷೇಪ ಸಾರ್ವಜನಿಕ ಟೀಕೆಗೆ ಗುರಿಯಾಗಿ ರೇಗನ್ ಚುನಾವಣೆಗಳಲ್ಲಿ ಸೋಲಬಹುದೆಂದು ಸಲಹಾಗಾರರು ತಿಳಿಸಿದ್ದಾರೆ ಆದರೆ ಅಮೇರಿಕದ ಆಳುವ ವರ್ಗಗಳಲ್ಲಿನ ಜನಸುಮ್ಮನಿರುತ್ತಾರೆಯೆ ?. ಪ್ಯಾರಿಸ್ಸಿನ ಪತ್ರಿಕೆಯೊಂದು ಬರೆದಿರುವಂತೆ, ಅಮೇರಿಕಕ್ಕೆ ಅತ್ಯಂತ ಮಹತ್ವದ ವಿಷಯವೆಂದರೆ ಎಲ್ ಸಾಲ್ವಡೋರನಲ್ಲಿ ತನ್ನ ಕೈಗೊಂಬೆ ಸರ್ಕಾರ ಬೀಳದಿರುವಂತೆ ನೋಡಿಕೊಳ್ಳುವುದು.

ಮಾರ್ಚ್ ೨೮, ನಿರುದ್ಯೋಗ ವಿರೋಧೀ ದಿನಾಚರಣೆ

ಮಾರ್ಚ್ 3 ಮತ್ತು 4 ರಂದು ಬೆಂಗಳೂರಿನಲ್ಲಿ ಸೇರಿದ ಡಿ. ವೈ. ಎಫ್. ಐ. ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಮಾರ್ಚ್ 28 ರ ನಿರುದ್ಯೋಗ ವಿರೋಧೀ ದಿನಾಚರಣೆಯನ್ನು ಯಶಸ್ವಿಗೊಳಿಸ ಬೇಕೆಂದು ತನ್ನ ಘಟಕಗಳಿಗೂ ಹಾಗೂ ರಾಜ್ಯದ ಯುವ ಜನತೆಗೂ ಕರೆ ನೀಡಿದೆ.

ಅಲ್ಲದೆ ಮಾ. 2 ರ ನಿರುದ್ಯೋಗ ವಿರೋಧೀ ದಿನಾಚರಣೆಯ ಅಂಗವಾಗಿ ಮಾರ್ಚ್ 23 ರಿಂದ 28 ರವರೆಗೆ ಒಂದು ವಾರ ಕಾಲ ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಪ್ತಾಹವನ್ನು ಆಚರಿಸಲಿದೆಯೆಂದು ಪ್ರಕಟನೆ ತಿಳಿಸಿದೆ.

ತಾರೀಖು 23-3-84 ರಂದು ಭಗತ್ ಸಿಂಗ್ ದಿನಾಚರಣೆ, 24-3-84 ರಂದು ವಿಶ್ವ ಶಾಂತಿ ದಿನಾಚರಣೆ, 25-3-84 ರಂದು ರಾಷ್ಟ್ರೀಯ ಐಕ್ಯತಾ ದಿನಾಚರಣೆ, 26-3-84 ರಂದು ಬೆಲೆ ಏರಿಕೆ ವಿರೋಧಿ ದಿನಾಚರಣೆ, 27-3-84 ರಂದು ಬೆಲೆ ಏರಿಕೆ ವಿರೋಧಿ ದಿನಾಚರಣೆ, 28-3-84 ರಂದು ನಿರುದ್ಯೋಗ ವಿರೋಧಿ ದಿನಾಚರಣೆ.

ರಾಷ್ಟ್ರೀಯ ಐಕ್ಯತೆಗಾಗಿ ಹೋರಾಡುವಂತೆ ಡಿ. ವೈ. ಎಫ್. ಐ. ಕೇಂದ್ರ ಸಮಿತಿಯು ಕೊಟ್ಟ ಕರೆಯ ಮೇರೆಗೆ ರಾಜ್ಯ ಸಮಿತಿಯು ಮೇಲ್ಕಂಡ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂಬುದಾಗಿ ತಿಳಿಸಿರುವ ಪ್ರಕಟನೆ ಈ ವಾರಾಚರಣೆಯಲ್ಲಿ ನಿರುದ್ಯೋಗ, ಅನಕ್ಷರತೆ, ಬಡತನ ಮುಂತಾದ ಸಾಮಾಜಿಕ, ಆರ್ಥಿಕ ಸಮಸ್ಯೆಗಳ ವಿರುದ್ಧ ವಿಚಾರ ಸಂಕಿರಣ, ಮೆರವಣಿಗೆ, ಸತ್ಯಾಗ್ರಹ, ಬಹಿರಂಗ ಸಭೆಗಳನ್ನು ನಡೆಸುವುದೆಂದು ರಾಜ್ಯ ಸಮಿತಿ ತಿಳಿಸಿದೆ.

ಮಾರ್ಚ್ 28 ರಂದು 'ವಿಜಯ ನಗರ ಉಕ್ಕು ಕರ್ನಾಟಕದ ಹಕ್ಕು" ಎಂಬ ಘೋಷಣೆಯಡಿಯಲ್ಲಿ ಉಕ್ಕಿನ ಕಾರ್ಖಾನೆಗಾಗಿ ಒತ್ತಾಯಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಲಾಗುವುದೆಂದೂ ತಿಳಿಸಿದೆ.

ರಾಜ್ಯ ಸರ್ಕಾರದ ರೇಷ್ಮೆ ಇಲಾಖೆಯ ಹಂಗಾಮಿ ನೌಕರರು ನಡೆಸುತ್ತಿರುವ ಹೋರಾಟಕ್ಕೆ ರಾಜ್ಯ ಸಮಿತಿ ತನ್ನ ಬೆಂಬಲ ಸೂಚಿಸಿ ಎಲ್ಲಾ ಹಂಗಾಮಿ ನೌಕರರನ್ನು ಖಾಯಂಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

(5ನೇ ಪುಟದಿಂದ)

ಆದರೆ ಮಾನವಕುಲದ ನೋವು ಸಂಕಷ್ಟಗಳಿಗೆ ತಮ್ಮ ಪ್ರಿಯ ಪರಿಹಾರಗಳನ್ನು ಸೂಚಿಸುವುದರಲ್ಲಿ ನಿರತರಾಗಿರುವ ಆದರ್ಶವಾದಿಗಳು, ಕಲ್ಪನಾಲೋಕ ವಿಹಾರಿಗಳು, ಆಧ್ಯಾತ್ಮಿಕವಾದಿಗಳ ಮತ್ತು, "ಖ್ಯಾತಿವೇತ್ತ" ವ್ಯಕ್ತಿಗಳಲ್ಲಿ ಅವರು ಒಬ್ಬರಾಗಿರಲಿಲ್ಲ. ಹೊಸದೊಂದು ಯುಗದಲ್ಲಿ ಹುಟ್ಟಿ, ಬೆಳೆದ ಅದೃಷ್ಟ ಅವರದಾಗಿದ್ದು ಅವರೇ ಹೇಳುವಂತೆ "ನಮ್ಮ ಯುಗ ಅಂದರೆ ಬೂರ್ಜ್ವಾಗಳ ಯುಗದ ಒಂದು ವಿಶಿಷ್ಟ ಲಕ್ಷಣ ಪಡೆದಿದೆ. ಅದು ವರ್ಗ ವೈಷಮ್ಯವನ್ನು ಸರಳಗೊಳಿಸಿದೆ. ಸಮಾಜ ಹೆಚ್ಚೆಚ್ಚಾಗಿ ಪರಸ್ಪರ ನೇರವಾಗಿ ಮುಖಾಮುಖಿಯಾಗುತ್ತಿರುವ ಎರಡು ದೊಡ್ಡ ವಿರೋಧೀ ಶಿಬಿರಗಳಲ್ಲಿ ಎರಡು ದೊಡ್ಡ ವರ್ಗಗಳಾಗಿ-ಅಂದರೆ ಬೂರ್ಜ್ವಾ ವರ್ಗ ಮತ್ತು ಕಾರ್ಮಿಕ ವರ್ಗವಾಗಿ-ವಿಭಜನೆಗೊಳ್ಳುತ್ತಿದೆ" (ಮುಂದುವರಿಯುತ್ತದೆ)

ನಟ ರಾಜ್‌ಕುಮಾರ್ ಮೇಲಿನ ಹಲ್ಲೆಗೆ ಖಂಡನೆ

ಕಳೆದ ಶನಿವಾರ ಊಟಿಯ ಬಳಿ ಚಿತ್ರ ನಟ ರಾಜಕುಮಾರ್ ಅವರ ಮೇಲೆ ನಡೆಯಿತೆನ್ನಲಾದ ಹಲ್ಲೆಯನ್ನು ಎಸ್. ಎಫ್. ಐ. ಹಾಗೂ ಡಿ. ವೈ. ಎಫ್. ಐ. ಕರ್ನಾಟಕ ರಾಜ್ಯ ಶಾಖೆಗಳು ಖಂಡಿಸಿವೆ. ಸೂಕ್ತ ರಕ್ಷಣೆ ಒದಗಿಸುವಲ್ಲಿ ವಿಫಲರಾದ ಪೋಲೀಸ್ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಿದ ಹಾಗೂ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿರುವ ತಮಿಳುನಾಡು ರಾಜ್ಯ ಸರ್ಕಾರವನ್ನು ಶ್ಲಾಘಿಸಿವೆ.

ಈ ಪ್ರಕರಣದ ದುರುಪಯೋಗ ಪಡೆದು ರಾಜ್ಯದಲ್ಲಿ ಅರಾಜಕತೆಯನ್ನುಂಟು ಮಾಡಲು ಮತ್ತು ಜನತಾ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ (ಐ) ಪಕ್ಷವು ನಡೆಸಿರುವ ಸಂಚನ್ನು ತೀವ್ರವಾಗಿ ಖಂಡಿಸಿ ರಾಜ್ ಅಭಿಮಾನಿಗಳ ಹೆಸರಿನಲ್ಲಿ ಬೆಂಗಳೂರಿನಲ್ಲಿ ಜನತಾ ಪಕ್ಷದ ಕಚೇರಿಯ ಮೇಲೆ ನಡೆಸಿದ ಧಾಳಿಯು ಈ ಪಿತೂರಿಯನ್ನು ಸ್ಪಷ್ಟವಾಗಿ ಬಯಲಿಗೆಳೆದಿದೆ ಎಂಬುದಾಗಿ ಹೇಳಿಕೆ ತಿಳಿಸಿದೆ.

ಇದೇ ಸಂಧರ್ಭದಲ್ಲಿ ಸಮಾಜ ಘಾತುಕ ಶಕ್ತಿಗಳು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿರುವುದನ್ನು ಹಾಗೂ ಮುಗ್ಧ ತಮಿಳು ಜನರ ಮೇಲೆ ಅಮಾನುಷ ದೌರ್ಜನ್ಯ ನಡೆಸಿರುವುದನ್ನು ಖಂಡಿಸಿರುವ ಪ್ರಕಟನೆ ಈ ಘಟನಾವಳಿಗಳು ವಿವಿಧ ಭಾಷಾ ಜನಾಂಗಗಳ ಭಾರತೀಯರ ಭಾವೈಕ್ಯತೆಗೆ ಗಂಡಾಂತರಕಾರಿಯಾಗಿದೆ ಎಂದು ಹೇಳಿದೆ.

ಭಾಷಾ ಅಲ್ಪಸಂಖ್ಯಾತರಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿರುವ ಎರಡೂ ಸಂಘಟನೆಗಳು, ಕನ್ನಡಿಗರು ಮತ್ತು ಕನ್ನಡೇತರರು ಸೌಹಾರ್ದ ವಾತಾವರಣವನ್ನು ಕಾಪಾಡಿಕೊಂಡು ಬರಬೇಕೆಂದು ವಿನಂತಿಸಿದೆ.

ಯುದ್ಧವನ್ನು ಸೋಲಿಸಲು ಕರೆ

(1ನೇ ಪುಟದಿಂದ)

ಹೋರಾಟವನ್ನು ಇದು ಬಗ್ಗು ಬಡಿಯುತ್ತಿದೆ. ಅಂಗೋಲ, ಮೊಜಾಂಬಿಕ್‌ಗಳ ಮೇಲೆ ಅಮೇರಿಕಾ ದಾಳಿಯ ಸೂಚನೆ ಕಂಡು ಬರುತ್ತಿದೆ. ಇದು ಪಾಕಿಸ್ಥಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವ ಮೂಲಕ ಭಾರತ ದೇಶದ ಭದ್ರತೆಗೇ ಬೆದರಿಕೆ ಒಡ್ಡಿದೆ. ಹಿಂದೂ ಮಹಾಸಾಗರ, ಡಿಯಗೋ ಗಾರ್ಸಿಯಾಗಳಲ್ಲಿ ಅಮೇರಿಕ ತನ್ನ ಸೈನ್ಯ ನೆಲೆ ಬೆಳೆಸುತ್ತಿದೆ. ಈ ಹಿನ್ನಲೆಯಲ್ಲಿ ಪಾಕಿಸ್ಥಾನ ಮತ್ತು ಬಾಂಗ್ಲಾ ದೇಶದಲ್ಲಿ ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆಗಾಗಿ ನಡೆಯುತ್ತಿರುವ ಚಳುವಳಿ ಮಹತ್ವದ್ದಾಗಿದ್ದು ಅದಕ್ಕೆ ಪೂರ್ಣ ಬೆಂಬಲ ನೀಡುವುದರೊಂದಿಗೆ ಸಾಮ್ರಾಜ್ಯಶಾಹಿ ಅಮೇರಿಕಾದ ಯುದ್ಧಕೋರ ನೀತಿಯ ವಿರುದ್ಧ ಜನಜಾಗೃತಿ ಮೂಡಿಸಬೇಕು ಎಂದು ದೆಹಲಿ ಘೋಷಣೆಯಲ್ಲಿ ಕರೆ ನೀಡಲಾಗಿದೆ. ದೇಶದಾದ್ಯಂತ ಸಾಮೂಹಿಕ ಮೆರವಣಿಗೆ, ಪ್ರದರ್ಶನ ಸಭೆ ಮತ್ತು ಸಮಾವೇಶಗಳ ಮೂಲಕ ಸಾಮ್ರಾಜ್ಯಶಾಹಿಗಳ ಯುದ್ಧದ ಅಪಾಯದ ಬಗ್ಗೆ ವಿವಿಧ ರಾಜ್ಯಗಳಲ್ಲಿ ಜನಜಾಗೃತಿ ಕೆಲಸ ನಡೆದಿರುವುದನ್ನು ಗುರುತಿಸಿದ ಸಮಾವೇಶದ ನಿರ್ಣಯದಲ್ಲಿ ಈ ಚಳುವಳಿಯನ್ನು ಇನ್ನಷ್ಟು ಬಲಪಡಿಸಿ ವಿಸ್ತರಿಸಲು, ಜಗತ್ತಿನ ಎಲ್ಲಾ ಶಾಂತಿ ಪ್ರಿಯ ಶಕ್ತಿಗಳೊಂದಿಗೆ ಒಂದಾಗಿ ಹೋರಾಡಲು ಕರೆ ನೀಡಲಾಗಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಯು ಒಡ್ಡಿರುವ ಯುದ್ಧದ ಅಪಾಯದ ವಿರುದ್ಧ, ಅದರ ಆಕ್ರಮಣಕೋರ ನೀತಿಯ ವಿರುದ್ಧ ದೃಢ ವಿರೋಧವನ್ನು ವ್ಯಕ್ತಪಡಿಸಲು ಭಾರತ ಸರಕಾರವನ್ನು ಶಾಂತಿ ಸಮಾವೇಶವು ಒತ್ತಾಯಪಡಿಸುಧಾಗಿ ಘೋಷಣೆ ತಿಳಿಸಿದೆ. ಮಾನವ ಕೋಟಿ ಇಂತಹ ಅಪಾಯದ ಪರಿಸ್ಥಿತಿಯಲ್ಲಿರುವಾಗ, ದೇಶದಾದ್ಯಂತ ಬಲಿಷ್ಟ ಚಳುವಳಿಯನ್ನು ರೂಪಿಸಿ ಜನಜಾಗೃತಿ ಮೂಡಿಸುವ ಪ್ರತಿಜ್ಞೆಯನ್ನು ಸಮಾವೇಶದ ಘೋಷಣೆ ಮಾಡಿರುತ್ತದೆ. ಶಾಂತಿ ಸಮಾವೇಶದ "ದೆಹಲಿ ಘೋಷಣೆಯು" ಪ್ರತಿನಿಧಿಗಳ ಕರತಾಡನಗಳೊಂದಿಗೆ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಸಮಾವೇಶದಲ್ಲಿ ವಿವಿಧ ಪಕ್ಷಗಳ, ಸಾಮೂಹಿಕ ಸಂಘಟನೆಗಳ ಪ್ರಮುಖ ನಾಯಕರುಗಳು ಮಾತನಾಡಿದರು.

ಬಿ. ಟಿ. ರಣದಿವೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪೋಲಿಟ್‌ಬ್ಯೂರೋ ಸದಸ್ಯರಾದ ಬಿ. ಟಿ. ರಣದಿವೆಯವರು ಶಾಂತಿ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ, ಪ್ರಪಂಚದಾದ್ಯಂತ ಬೆಳೆದು ಬರುತ್ತಿರುವ ಶಾಂತಿ ಚಳುವಳಿಗೆ ಸರಿಸಮಾನಾಗಿ ಭಾರತದಲ್ಲಿಯೂ ವ್ಯಾಪಕ ಚಳುವಳಿ ರೂಪಿಸಲು ಕರೆ ನೀಡಿದರು. "ನ್ಯೂಟ್ರಾನ್ ಬಾಂಬ್ ಹಾಕಿದರೆ ಎಷ್ಟು ಜನ ಸಾಯಬಹುದು ಎಂದು ಲೆಕ್ಕ ಹಾಕುವುದು ಮೂರ್ಖತನ. ಜಗತ್ತೇ ನಾಶವಾದೀತು. ಕಾಂಪ್ಯೂಟರ್ ಹಾಳಾದರೆ, ರೇಗನ್ ಮತ್ತಿನಲ್ಲಿ ಗುಂಡಿ ಒತ್ತಿದರೆ ಕ್ಷಣಮಾತ್ರದಲ್ಲಿ ಬಾಂಬ್ ಸ್ಫೋಟಗೊಳ್ಳಬಹುದು. ಅಮೇರಿಕವು ಅಂತರಿಕ್ಷ ಯುದ್ಧಕೂ ಅಣಿಯಾಗುತ್ತಿದೆ ಯುದ್ಧ ಮನೆ ಬಾಗಿಲಿಗೆ ಬಂದಿರುವಾಗ ನಮಗೆ ಸಂಬಂಧ ಇಲ್ಲವೆಂದು ಕುಳಿತಿರುವುದು ಅಪಾಯಕಾರಿ ಎಂದು ಎಚ್ಚರಿಸಿದರು. ಎರಡು ಬಲಾಢ್ಯ ರಾಷ್ಟ್ರಗಳು ಜಗತ್ತನ್ನು ಯುದ್ಧಕ್ಕೆ ತಳ್ಳಿದೆ ಎಂಬ ಸಿದ್ಧಾಂತವನ್ನು ಖಂಡಿಸಿದ ಕಾ. ಬಿ. ಟಿ. ಆರ್ ರವರು ಸಾಮ್ರಾಜ್ಯಶಾಹಿ ಅಮೇರಿಕ ಮಾತ್ರವೇ ಇಂದು ಜಗತ್ತಿನಲ್ಲಿ ಯುದ್ಧದ ವಾತಾವರಣ ನಿರ್ಮಾಣಕ್ಕೆ ಕಾರಣವೆಂಬುದನ್ನು ವಿವರಿಸುತ್ತಾ ರಷ್ಯ ದೇಶವು ಜಾಗತಿಕ ಶಾಂತಿಗಾಗಿ ನಡೆಸುತ್ತಿರುವ ಪ್ರಯತ್ನಗಳನ್ನು ಮನಮಿಡಿಯುವಂತೆ ವಿವರಿಸಿದರು. 'ಜನತೆಯ ಶಕ್ತಿಯೇ ಅತ್ಯಂತ ದೊಡ್ಡ ಶಕ್ತಿ. ಇದರ ಮುಂದೆ ಯಾವ ಶಕ್ತಿಯೂ ನಿಲ್ಲಲಾರದು. ಆದ್ದರಿಂದ ಜನಶಕ್ತಿಯನ್ನು ಸಾಮ್ರಾಜ್ಯಶಾಹಿಗಳ ವಿರುದ್ಧ ಅಣಿನೆರೆಸಿರಿ" ಎಂದು ಪ್ರತಿನಿಧಿಗಳ ಕರತಾಡನಗಳ ನಡುವೆ ಕರೆ ನೀಡಿದರು.

ಈ ಸಮಾವೇಶದಲ್ಲಿ ಜಗಜೀವನ್ ರಾಂ, ಶರದ ಪವಾರ, ಮೀರ್ ಕಾಸಿಂ, ಸುಶಿ ಲಾಗೋಪಾಲನ್, ವಿಮಲ್ ಫಾರೂಕಿ, ಹಿ. ರಾಮಮೂರ್ತಿ, ಹಸನ್ ಮುಲ್ಲಾ, ಹರ್‌ಕಿಶನ್ ಸಿಂಗ್ ಸೂರಜಿತ್ ಮೊದಲಾದವರು ಭಾಷಣ ಮಾಡಿದರು.

ಸಮಾವೇಶದ ಮುಖ್ಯ ನಿರ್ಧಾರಗಳು

1984 ಏಪ್ರಿಲ್ 13 ರಂದು ರಾಷ್ಟ್ರದಾದ್ಯಂತ ಶಾಂತಿ ದಿನಾಚರಣೆಯನ್ನು ಆಚರಿಸುವುದು.

ಪಂಜಾಬ್ ಹರ್ಯಾಣಗಳಲ್ಲಿ ಕೆಲವು ಕೋಮುವಾದಿ ಶಕ್ತಿಗಳು ಹಿಂದು ಮತ್ತು ಸಿಖ್ ಜನಾಂಗದ ನಡುವೆ ಹರಿಯಬಿಟ್ಟಿರುವ ಕೋಮು ವೈಶ್ಯಮ್ಯದ ಬಗ್ಗೆ ದುಃಖ ವ್ಯಕ್ತಪಡಿಸಿದ ಸಮಾವೇಶವು ಅಕ್ಷಮ್ಯತರಾದ ನಿರಪರಾಧಿ ವ್ಯಕ್ತಿಗಳಿಗೆ ಸಂತಾಪ ಸೂಚಿಸುತ್ತಾ ಕೋಮು ಸೌಹಾರ್ಧವನ್ನು ಕಾಪಾಡುವಂತೆ ಪಂಜಾಬ್ ಮತ್ತು ಹರ್ಯಾಣದ ಜನತೆಗೆ ನೀಡಿತು.

ಕರ್ನಾಟಕದಿಂದ ಶಾಂತಿ ಸಮಾವೇಶದಲ್ಲಿ 8 ಪ್ರತಿನಿಧಿಗಳು ಭಾಗವಹಿಸಿದ್ದರು. ಪಿ. ರಾಮಚಂದ್ರರಾವ್ (ಶಾಸಕರು), ಸಿ. ನಂಜುಂಡಪ್ಪ (ಸಿಐಟಿಯು) ಅಪ್ಪಸ್ವಾಮಿರೆಡ್ಡಿ (ಶಾಸಕರು), ಜಗನ್ನಾಥ್ (ಪ್ರಾಂತ ರೈತ ಸಂಘ), ವಿ.ಎನ್ ಹಳಕಟ್ಟಿ (ಪ್ರಾಂತ ರೈತ ಸಂಘ), ಲಕ್ಷ್ಮಣರೆಡ್ಡಿ (ಸಿಪಿಐಎಂ), ಟಿ. ಎಸ್. ನಾಯಕ್ (ದಾಂಡೆಲಿ ಪುರಸಭಾ ಅಧ್ಯಕ್ಷರು), ಆರ್. ಜಯಕುಮಾರ್ (ಎಸ್‌ಎಫ್‌ಐ).

ಪೋಲೀಸ್ ಠಾಣೆಗಳಲ್ಲಿ ಕೊಲೆಗಳು ನಿಲ್ಲಲಿ

(1ನೇ ಪುಟದಿಂದ)

ಬೆಂಗಳೂರಿನ ಶಿವಾಜಿನಗರದಲ್ಲಿ ತಾ-10 ರಂದು ರಾತ್ರಿ ಸಯ್ಯದ್ ಉಮರ (ಮುನ್ನಾ) ಎಂಬ 25 ವರ್ಷದ ಯುವಕನನ್ನು ಬಂಧಿಸಿದ ನಂತರ ಮರುದಿವಸ ಮುಂಜಾನೆ ಅವನ ಹೆಣವನ್ನೇ ನೋಡಬೇಕಾಗಿ ಬಂದಿರುವ ವಿಚಿತ್ರ ಘಟನೆ ಪೋಲೀಸ್ ಖಾತೆಯನ್ನು ಸಂಪೂರ್ಣ ಬದಲಾವಣೆ ಮಾಡಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ. ಸಯ್ಯದ್ ಒಬ್ಬ ರೌಡಿ ಇದ್ದ ತಪ್ಪ. ಎದೆ ನೋಯುತ್ತಿದೆಯೆಂದು ಹೇಳಿದಾಗ ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತು ಅಲ್ಲಿ ಅವನು ಅಸುನೀಗಿದ ಎಂಬ ಪೋಲೀಸ್ ಅಧಿಕಾರಿಗಳ ಹೇಳಿಕೆಯನ್ನು ನಂಬುವುದು ಕಷ್ಟ. ಹಾಗಿದ್ದಲ್ಲಿ ಪತ್ರಿಕಾ ಕರ್ತರು ಸಯ್ಯದನ ಹೆಣವನ್ನು ನೋಡಲು ಅಪೇಕ್ಷಿಸಿದಾಗ, ಅದನ್ನು ಯಾಕೆ ನಿರಾಕರಿಸಲಾಯಿತೆಂಬುದಕ್ಕೆ ಪೋಲೀಸ್ ಅಧಿಕಾರಿಗಳು ಸಮರ್ಪಕ ಉತ್ತರ ನೀಡಲೇ ಬೇಕು.

ಜನತೆ ಉದ್ರೇಕಗೊಳ್ಳುವ ಮುಂಚೆಯೇ ತಪ್ಪಿತಸ್ಥ ಪೋಲೀಸರನ್ನೂ, ಅಧಿಕಾರಿಗಳನ್ನೂ ಸಸ್ಪೆಂಡ್ ಮಾಡುತ್ತಿದ್ದರೆ ಬಹುತೇಕ ಕಳೆದ ಒಂದು ವಾರ ನಡೆದಿರುವ ಹಿಂಸಾಚಾರ, ಲೂಟಿಗಳು ಘಟಿಸುತ್ತಿರಲಿಲ್ಲ. ಜನರಿಗೆ ತೊಂದರೆಯಾಗುತ್ತಿರಲಿಲ್ಲ. ಅನುಭವದಿಂದ ಪೋಲೀಸ ಅಧಿಕಾರಿಗಳು ಪಾಠ ಕಲಿಯುತ್ತಿಲ್ಲೆಂಬುದಕ್ಕೆ ಇದು ಸಾಕ್ಷಿ.

ಇಂಥ ಸಂದರ್ಭಗಳನ್ನು ಸಮಾಜ ಘಾತುಕ ಶಕ್ತಿಗಳು ಉಪಯೋಗಿಸಿಕೊಂಡು ಪರಿಸ್ಥಿತಿಯನ್ನು ಉಲ್ಬಣಗೊಳಿಸುತ್ತವೆಂಬ ಸಂಗತಿ ಎಲ್ಲರಿಗೂ ಗೊತ್ತು. ಹಾಗಿರುವಾಗ ಹೆಗಡೆ ಸರಕಾರವನ್ನು ಉರುಳಿಸುವ ಹೊಂಚಿನಲ್ಲಿ ತಲ್ಲೀನರಾಗಿರುವ ಶಕ್ತಿಗಳು ಪೋಲೀಸರ ದುಷ್ಕೃತ್ಯದಿಂದ ಮರಣವನ್ನಪ್ಪಿದ ಸಯ್ಯದ ಉಮರನ ಪ್ರಕರಣವನ್ನು ತಮ್ಮ ರಾಜಕೀಯ ಹೇತುಗೆ ದುರುಪಯೋಗ ಮಾಡಿಕೊಂಡು ಕ್ಯಾದೆ, ಕಾನೂನು ಉಲ್ಲಂಗಿಸಿ ನಾಗರಿಕ ಆಸ್ತಿ, ಜೀವಗಳಿಗೆ ಹಾನಿಯನ್ನುಂಟು ಮಾಡುವಂತೆ ಒಂದು ಕೋಮಿನವರನ್ನ ಪ್ರಚೋದಿಸುತ್ತಿರುವುದು ನಿಜವಾಗಿಯೂ ಖಂಡನೀಯ ಮತ್ತು ನಾಚಿಕೆಗೇಡು ವರ್ತನೆ. ಮಾಜಿ ಮಂತ್ರಿ ಸಿ. ಎಂ. ಇಬ್ರಾಹಿಂ ಹಾಗೆಯೇ ಇತರ ಕಾಂಗ್ರೆಸ್ಸಿನ ಚೋಟಾ ಮೋಟಾ ಮುಖಂಡರೆಲ್ಲ ಪ್ರತ್ಯಕ್ಷವಾಗಿಯೇ ಪ್ರಚೋದನೆ ನೀಡುತ್ತಿದ್ದರೆಂದೂ ವದಂತಿಗಳಿವೆ. ವ್ಯಾಸ್ ಆಫ್ ಕರ್ನಾಟಕ ಎಂಬ ಇಂಗ್ಲಿಷ್ ವಾರ ಪತ್ರಿಕೆಯಲ್ಲಿ ರೇಶನ ಅಂಗಡಿಗಳ ಕುರಿತು ಆಹಾರ ಸರಬರಾಜು ಕಾರ್ಪೊರೇಶನಿನ ಅಧ್ಯಕ್ಷರಾದ ವಿ. ಶ್ರೀನಿವಾಸನ್ ಎಂಬವರು ವ್ಯಕ್ತ ಮಾಡಿದರೆಂದು ಹೇಳಲಾದ ಅಭಿಪ್ರಾಯವನ್ನು ಪ್ರಕಟಿಸಿ, 25 ಸಾವಿರಕ್ಕೂ ಮೇಲ್ಪಟ್ಟು ಪ್ರತಿಗಳನ್ನು ಪುಕ್ಕಟೆಯಾಗಿ ಹಂಚಿ ಶಿವಾಜಿ ನಗರದ ಘಟನೆ ಬೆಂಗಳೂರು ನಗರದ ಇತರ ಪ್ರದೇಶಗಳಿಗೂ ಹರಡುವಂತೆ ಮಾಡಿರುವುದನ್ನು ನೋಡುವಾಗ ಮನುಷ್ಯನ ನೀಚ ಪ್ರವೃತ್ತಿ ಎಷ್ಟು ಕೀಳ್ಮಟ್ಟಕ್ಕೇರಿದೆಂಬುದನ್ನು ತೋರಿಸುತ್ತದೆ.

ಪೋಲೀಸರ, ಪೋಲೀಸ್ ಅಧಿಕಾರಿಗಳ ವರ್ತನೆಯಲ್ಲಿ ಆಮೂಲಾಗ್ರ, ಬದಲಾವಣೆಯಾಗಬೇಕೆಂದೂ, ಇಲ್ಲವಾದರೆ ತಪ್ಪಿತಸ್ಥರ ಮೇಲೆ ನಿರ್ಭಿಡೆಯಿಂದ ಉಗ್ರ ಕ್ರಮ ಕೈಗೊಳ್ಳುವುದು ಹೆಗಡೆಯವರ ಆದ್ಯ ಕರ್ತವ್ಯವೆಂದು ಹೇಳುವಾಗ ಘಟನೆಯಾದ ದಿವಸವೇ ಪೋಲೀಸರನ್ನು ಸಸ್ಪೆಂಡ್ ಮಾಡಿ, ಘಟನೆಯ ಕುರಿತು ನ್ಯಾಯಾಂಗ ವಿಚಾರಣೆಗೆ ಆದೇಶ ನೀಡದಿರುವುದು ಹೆಗಡೆ ಸರಕಾರದ ತಪ್ಪೆಂದೂ, ತಡವಾಗಿಯಾದರೂ ವಿಚಾರಣೆಗೆ ಆದೇಶ ನೀಡಿರುವುದು ಸ್ವಾಗತಾರ್ಹವೆಂದೂ ಅಭಿಪ್ರಾಯ ವ್ಯಕ್ತ ಮಾಡಲಿಚ್ಛಿಸುತ್ತೇವೆ. ಅದೇ ಸಮಯದಲ್ಲಿ, ಯಾವ ಕೋಮಿನವರೇ ಆಗಲಿ, ಅದರಲ್ಲೂ ಅಲ್ಪ ಮತಸ್ಥರು, ಸುಳ್ಳು ಪ್ರಚಾರಗಳಿಗೆ ಕಿವಿಗೊಡದೆ, ತಮ್ಮನ್ನು ಬಲಿಪಶುಗಳನ್ನಾಗಿ ಮಾಡುವ ರಾಜಕಾರಣಿಗಳ ಬಲೆಗೆ ಬೀಳದೆ, ಸಂಯಮದಿಂದ ವರ್ತಿಸಿ ಜಾತಿ ಸೌಹಾರ್ದತೆ, ಮತ್ತು ಶಾಂತಿ ಕಾಪಾಡಲು ಮುಂದೆ ಬರಬೇಕೆಂದು ಕೇಳಿಕೊಳ್ಳುತ್ತೇವೆ, ಸಯ್ಯದ್ ಉಮರನ ಮರಣಕ್ಕೆ ಕಾರಣೀಭೂತರಾದವರಿಗೆ ಉಗ್ರ ಶಿಕ್ಷೆ ವಿಧಿಸಬೇಕೆಂದೂ ಕೇಳಿಕೊಳ್ಳುತ್ತೇವೆ.

— ಎನ್. ಕೆ. ಉಪಾಧ್ಯಾಯ

ಸಿ ಐ ಟಿ ಯು ಬೇಡಿಕೆ ದಿನಾಚರಣೆ

ಸಿ ಐ ಟಿ ಯು ಬೇಡಿಕೆಗಳ ದಿನದ ಅಂಗವಾಗಿ 14-3-1984 ರಂದು ಹಾಸನದಲ್ಲಿ ಡೆಪ್ಯುಟಿ ಲೇಬರ್ ಕಮಿಷನರ ಕಛೇರಿಯನ್ನು ಪಿಕೆಟಿಂಗ್ ಮಾಡಿದವರ ಪೈಕಿ ನೂರು ಹತ್ತು ಮಂದಿಯನ್ನು ಪೋಲೀಸರು ಬಂಧಿಸಿದರು. ವಿ. ಸುಕುಮಾರ್ ಮತ್ತು ದೂಜ ಈ ಪಿಕೆಟಿಂಗ್ ನೇತೃತ್ವ ವಹಿಸಿದ್ದರು.

ಚಿಕ್ಕಮಗಳೂರಿನಲ್ಲಿ 14-3-1984 ರಂದು ಅಸಿಸ್ಟೆಂಟ್ ಲೇಬರ್ ಕಮಿಷನರ ಕಛೇರಿಯನ್ನು ಪಿಕೆಟಿಂಗ್ ಮಾಡಿದವರ ಪೈಕಿ ಎ. ಸಿ. ಕೇಶವ. ಜಿ. ಎಸ್. ರಾಘವೇಂದ್ರ, ಕೆ. ಸುಕುಮಾರ್ ಮತ್ತು ಕೆ. ವೇಲಾಯುಧ ಸೇರಿದಂತೆ 34 ಮಂದಿಯನ್ನು ಪೋಲೀಸರು ಬಂಧಿಸಿದರು.

ಶಿವಮೊಗ್ಗದಲ್ಲಿ ಕೆ. ಚಂದುಕುಟ್ಟಿಯವರ ನೇತೃತ್ವದಲ್ಲಿ ಒಂದು ನಿಯೋಗವು ಲೇಬರ್ ಆಫೀಸರನ್ನು ಭೇಟಿ ಮಾಡಿ ಸಿ ಐ ಟಿ ಯು ಬೇಡಿಕೆಗಳ ಮನವಿಯೊಂದನ್ನು ಸಲ್ಲಿಸಿದರು.

ಕೆ. ಜಿ. ಎಫ್.

ಕರ್ನಾಟಕ ರಾಜ್ಯ ಸಿ ಐ ಟಿ ಯು ಆದೇಶದ ಮೇರೆಗೆ ಕೆ. ಜಿ. ಎಫ್. ನಲ್ಲಿ ಭಾರತ ಗೋಲ್ಡ ಮೈನ್ ಎಂಪ್ಲಾಯೀಸ್ ಯೂನಿಯನಿನ ಪರವಾಗಿ ಮಾರ್ಚ್ 14 ರಂದು ಅಸಿಸ್ಟಂಟ ಲೇಬರ್ ಕಮಿಶನರ್ (ಕೇಂದ್ರ) ಆಫೀಸಿನೆದುರಿಗೆ ನೂರಾರು ಕಾರ್ಮಿಕರು ಮತ ಪ್ರದರ್ಶನ ಮತ್ತು ಪಿಕೆಟಿಂಗ್ ನಡೆಸಿದರು. ಕಾ. ಸರ್ವದಾಸ್ ಮತ್ತು ಟಿ. ಎಸ್ ಮಣಿಯವರು ಮುಖಂಡತ್ವ ವಹಿಸಿದರು.

ದ. ಕನ್ನಡದ ಉಡುಪಿ ಹಾಗೂ ಕುಂದಾಪುರಗಳಲ್ಲಿ ಸಹ ಬೇಡಿಕೆ ದಿನಾಚರಣೆಯು ಯಶಸ್ವಿಯಾಗಿ ನಡೆದ ವರದಿಗಳು ಬಂದಿವೆ.

ಸಂತಾಪ

ಬೆಂಗಳೂರಿನ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಮತ್ತು ಕಾರ್ಮಿಕ ಮುಖಂಡರಾದ ಕಾ. ಕೆ. ಎಸ್. ಸುಬ್ರಮಣ್ಯ ಅವರ ಪುತ್ರ ಶಶಿಧರನು ಫೆ. 13 ರಂದು ಕಾವೇರಿ ನದಿಯಲ್ಲಿ ಮುಳುಗಿ ಮೃತರಾದ ಸುದ್ದಿ ಬಂದಿದ್ದು ಸಿ. ಪಿ. ಐ. (ಎಂ) ಮತ್ತು ಐಕ್ಯರಂಗ ಅವರ ಅಕಾಲಿಕ ಮರಣಕ್ಕೆ ಸಂತಾಪ ವ್ಯಕ್ತ ಮಾಡುತ್ತದೆ. ಶಶಿಧರ ಮೈಸೂರಿನಲ್ಲಿರುವ ಸರಕಾರಿ ಆಯುರ್ವೇದ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ. ಕಾ. ಸುಬ್ರಮಣಿಯವರಿಗಾದ ದುಃಖದಲ್ಲಿ ನಾವೆಲ್ಲ ಪಾಲ್ಗೊಳ್ಳುತ್ತೇವೆ.

ಅಲ್ಲದೆ ದುರಂತದಲ್ಲಿ ಅಸುನೀಗಿದ ಇತರ ಮೂವರು ವಿದ್ಯಾರ್ಥಿಗಳ ನಿಧನಕ್ಕೆ ಹಾಗೂ ಅವರ ಮನೆಯವರಿಗೂ ಸಂತಾಪ ವ್ಯಕ್ತಪಡಿಸುತ್ತೇವೆ

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053 Editorial and managerial office, L 56, K. V. Temple Street, Sultanpet, B-53. Phone : 24154
Editor : P. Ramachandra Rao Managing Editor : N. K. Upadhyaya